30 April 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಾವು ಒಬ್ಬರಿಗೆ ನೆರವಾದರೆ ನಮ್ಮ ಕಷ್ಟದ ಕಾಲದಲ್ಲಿ ದೇವರು ಇಬ್ಬರನ್ನು ಸಹಾಯಕ್ಕೆ ಕಳುಹಿಸುತ್ತಾನೆ!

-ಸ್ನೇಹಾ ಆನಂದ್

info.varthaman@gmail.com



ವೈದ್ಯರ ಸಲಹಾ ಚೀಟಿ ಇಲ್ಲದೆ ಔಷಧಿ ಮಾರಾಟ ಮಾಡಿದರೆ ಕ್ರಮ: ಡಿಸಿ — ಪುಟ ಸಂ. 2



ಬೆಂಕಿ ಅವಘಡಗಳ ಜಾಗೃತಿ: ಅಗ್ನಿ ಶಾಮಕ ದಳದವರಿಂದ ಆಯೋಜನೆ — ಪುಟ ಸಂ. 3



ನೀರಿನ ಸಮಸ್ಯೆ ತುರ್ತಾಗಿ ಕೊಳವೆಬಾವಿ ಕೊರೆಸಿ: ಡಿಕೆಶಿ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 159 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಬಿಜೆಪಿಗೆ ಗೆಲುವು: ದೀದಿಗೆ ಶಾಕ್

## ಪಂಚ ರಾಜ್ಯ ಚುನಾವಣೋತ್ತರ ಸಮೀಕ್ಷೆಗಳಲ್ಲಿ ಬಹಿರಂಗ

ನವದೆಹಲಿ: ಕೇರಳ, ಪುದುಚೇರಿ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ಸೇರಿದಂತೆ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಮತದಾನ ಬುಧವಾರ ಪೂರ್ಣಗೊಂಡಿದೆ. ಈಗ ಎಕ್ಸಿಟ್ ಪೋಲ್ ಕುತೂಹಲ ಮೂಡಿಸಿದೆ.

ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯುವ ಸಾಧ್ಯತೆ ನಿಚ್ಚಳವಾಗಿವೆ. ಪಶ್ಚಿಮ ಬಂಗಾಳದ 2ನೇ ಹಂತದ ಮತದಾನ ಅಂತ್ಯವಾಗುತ್ತಲೇ ಚುನಾವಣೋತ್ತರ ಸಮೀಕ್ಷಾ ಫಲಿತಾಂಶ ಹೊರಬಿದಿದೆ. ಪಶ್ಚಿಮ ಬಂಗಾಳದಲ್ಲಿ ಹಾಲಿ ಸಿಎಂ ಮಮತಾ ಬ್ಯಾನರ್ಜಿಗೆ ಭಾರಿ ಹಿನ್ನಡೆಯಾಗಿದೆ. ಅಂತೆಯೇ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಕೇರಳ, ಪುದುಚೇರಿ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ವಿಧಾನಸಭೆ ಚುನಾವಣೆ ಮತದಾನ ಮುಕ್ತಾಯವಾಗಿದೆ. ಕೇರಳದಲ್ಲಿ ಎಲ್ ಡಿಎಫ್, ತಮಿಳುನಾಡಿನಲ್ಲಿ ಡಿಎಂಕೆ, ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯುವ ಸಾಧ್ಯತೆ ಇದೆ

ಬಂಗಾಳದಲ್ಲಿ ಬಿಜೆಪಿ ಇತಿಹಾಸ: ಇನ್ನು ತೀವ್ರ ಕುತೂಹಲ ಕೆರಳಿಸಿದ್ದ ಪಶ್ಚಿಮ ಬಂಗಾಳದಲ್ಲಿ ಆಡಳಿತ ವಿರೋಧಿ ಅಲೆ ನೆಪದಲ್ಲೇ ಬಿಜೆಪಿ ಅಧಿಕಾರ ಹಿಡಿಯಲಿದೆ ಎಂದು ಹೇಳಲಾಗುತ್ತಿದೆ. ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ 4 ರಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದು ಹೇಳಲಾಗಿದೆ.



### ಯಾವ ಸಮೀಕ್ಷೆಯಲ್ಲಿ ಏನು?

ಮ್ಯಾಟ್ರಿಜ್, ಪ್ರಜಾ ಸಮೀಕ್ಷೆ, ಸಮೀಕ್ಷೆಯ ದಿನಚರಿ ಮತ್ತು ಚಾಣಕ್ಯ ಚುನಾವಣೋತ್ತರ ಸಮೀಕ್ಷೆಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರದ ಗುದ್ದುಗೆ ಏರಲಿದೆ ಎಂದು ಹೇಳಲಾಗಿದೆ.

| ಮ್ಯಾಟ್ರಿಜ್ | |
|---|---|
| ಬಿಜೆಪಿ | 146–161 |
| ಟಿಎಂಸಿ | 125–140 |
| ಇತರರು | 6–1 |

| ಸಮೀಕ್ಷೆಯ ದಿನಚರಿ | |
|---|---|
| ಬಿಜೆಪಿ | 142–171 |
| ಟಿಎಂಸಿ | 99–127 |
| ಇತರರು | 5–9 |

| ಪ್ರಜಾ ಸಮೀಕ್ಷೆ | |
|---|---|
| ಬಿಜೆಪಿ | 178–208 |
| ಟಿಎಂಸಿ | 85–110 |
| ಇತರರು | 0–5 |

| ಚಾಣಕ್ಯ | |
|---|---|
| ಬಿಜೆಪಿ | 150–160 |
| ಟಿಎಂಸಿ | 130–140 |

## ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದು ಭಾರೀ ದುರಂತ

# ಏಳು ಮಂದಿ ದುರ್ಮರಣ

ಬೆಂಗಳೂರು: ಬೆಂಗಳೂರಿನಲ್ಲಿ ಬುಧವಾರ ಸಂಜೆ ಸುರಿದ ಬಿರುಗಾಳಿ ಸಹಿತ ಧಾರಾಕಾರ ಮಳೆಗೆ 7 ಮಂದಿ ಬಲಿಯಾಗಿ ದ್ದಾರೆ. ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಇಬ್ಬರು ಮಕ್ಕಳು ಸೇರಿ 7 ಮಂದಿ ಸಾವನ್ನಪ್ಪಿದ್ದಾರೆ.

ಅಲ್ಲದೆ, 7 ಮಂದಿ ತೀವ್ರ ಗಾಯಗೊಂಡಿದ್ದಾರೆ. ಗಾಯಾಳುಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೃತಪಟ್ಟವರ ಪೈಕಿ ಕೆಲವರು ಫುಟ್‌ಪಾತ್ ಬಳಿ ತಳ್ಳುಗಾಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಈ ಪೈಕಿ ಕೆಲವು ಪಾದಚಾರಿಗಳು ಇರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಆಸ್ಪತ್ರೆ ಗೋಡೆ ಕುಸಿದ ಬೆನ್ನಲ್ಲೇ ಅಲ್ಲಿದ್ದ ಸಾರ್ವಜನಿಕರು ರಕ್ಷಣಾ ಕಾರ್ಯ ನಡೆಸಿ ಕೆಲವರನ್ನು ರಕ್ಷಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಹಳೆಯ



ಗೋಡೆಗೆ ದೊಡ್ಡ ಟಾರ್ಪಲ್ ಹಾಕಿ ವ್ಯಾಪಾರ ಮಾಡುತ್ತಿದ್ದರು. ದಿಢೀರನೆ ಮಳೆ ಜೋರಾಗಿ ಸುರಿದ ಕಾರಣ ರಕ್ಷಣೆಗೆ ವ್ಯಾಪಾರಿಗಳು ಮತ್ತು ಪಾದಾಚಾರಿಗಳು ಟಾರ್ಪಲ್ ಅಡಿ ನಿಂತಿದ್ದಾರೆ. ಈ ವೇಳೆ ಬಿರುಗಾಳಿ ಸಹಿತ ಮಳೆಗೆ ಗೋಡೆ ಕುಸಿದಿದೆ.

ಪುಟ 2ಕ್ಕೆ

# ಮಲ್ಲಿಕಾರ್ಜುನ ಖರ್ಗೆ ಸಿಎಂ ಆದರೆ ಸ್ವಾಗತ!

## ಡಿಕೆಶಿ ಬಣದ ವಿರುದ್ಧ ಮತ್ತೊಂದು ದಾಳ ಉರುಳಿಸಿದ ಡಾ.ಜಿ. ಪರಮೇಶ್ವರ್

ಕಲಬುರಗಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯದ ಮುಖ್ಯಮಂತ್ರಿ ಆದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಎಲ್ಲರೂ ಸ್ವಾಗತಿಸುತ್ತಾರೆ ಎಂದು ಗೃಹ



ಸಚಿವ ಜಿ.ಪರಮೇಶ್ವರ್ ದಾಳ ಉರುಳಿಸಿದ್ದಾರೆ.

ಮಾಧ್ಯಮಗಳ ಜೊತೆ ಬುಧವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ವಿಷಯಕ್ಕೆ ಸಂಬಂಧಿಸಿ



ದಂತೆ ಡಿಕೆಶಿ ಬಣಕ್ಕೆ ಈ ಮೂಲಕ ಟಾಂಗ್ ನೀಡಿದ್ದಾರೆ. ಚುನಾವಣೆ ಫಲಿತಾಂಶದ ನಂತರ ನಾಯಕತ್ವ ಬದಲಾವಣೆ ಅಥವಾ ಸಚಿವ ಸಂಪುಟ ಪುನರ್ ರಚನೆ ಕುರಿತ ಸಂಭಾವ್ಯ ನಿರ್ಧಾರದ ಬಗ್ಗೆ ಪಕ್ಷ, ರಾಜಕೀಯ

ಪುಟ 2ಕ್ಕೆ

### ದಲಿತ ಸಿಎಂ ಮುನ್ನೆಲೆಗೆ ಸಹಜ

**ಯತೀಂದ್ರ ಟಾಂಗ್**

ರಾಯಚೂರು: ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಹೈಕಮಾಂಡ್ ಕೆಳಗಿಳಿಸಿದರೆ ದಲಿತ ಸಿಎಂ ವಿಚಾರ ಮತ್ತೆ ಮುನ್ನೆಲೆಗೆ ಬರುವುದು ಸಹಜ ಎಂದು ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಹೇಳಿದರು. ರಾಯಚೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದರು. ಡಿಸಿಎಂ ಡಿ.ಕೆ ಶಿವಕುಮಾರ್

ಪುಟ 2ಕ್ಕೆ

### ಲಾಬಿ ನಡೆದಿಲ್ಲ

ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಕೂಗಿನ ಬಗ್ಗೆ ಮಾತನಾಡಿದ ಸಚಿವ ಪರಮೇಶ್ವರ್, ಅದು ದಲಿತರು ಸೇರಿದಂತೆ ಜನರ ಬಯಕೆಯಾಗಿದೆ. ಆದರೆ, ಈ ಕುರಿತು ಯಾವುದೇ ಲಾಬಿ ನಡೆಯುತ್ತಿಲ್ಲ ಎಂದು ಸ್ಪಷ್ಟಪಡಿಸಿದರು. ದಲಿತ ಸಚಿವರು ಪದೇಪದೇ ಡಿನ್ನರ್ ಮೀಟಿಂಗ್ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಹೌದು, ನಾವು ಭೇಟಿ ಆಗುತ್ತೇವೆ. ಮುಖ್ಯಮಂತ್ರಿ

ಪುಟ 2ಕ್ಕೆ

## ಮೇ 6ರಂದು ಮತ್ತೆ ಶಾಸಕರ ದೆಹಲಿ ಯಾತ್ರೆ

ಬೆಂಗಳೂರು: ರಾಜ್ಯದಲ್ಲಿ ಸಂಪುಟ ಪುನರ್ ರಚನೆಯ ಕೂಗು ಮತ್ತೆ ತೀವ್ರಗೊಂಡಿದೆ. ಮೇ 6 ಅಥವಾ 7 ರಂದು ಮತ್ತೆ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದಾಗಿ ಸಚಿವ ಸ್ಥಾನದ ಆಕಾಂಕ್ಷಿಯಾದ ಮುಖ್ಯ ಸಚೇತಕ ಅಶೋಕ್ ಪಟ್ಟಣ್ ತಿಳಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಂಪುಟದಲ್ಲಿ ನಮಗೂ ಅವಕಾಶ ನೀಡಬೇಕು ಎಂದು ಈ ಹಿಂದೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿಯಾಗಿ ಚರ್ಚಿಸಿದ್ದೆವು. ನಮಗೆ ಅವಕಾಶ ನೀಡುವ ಭರವಸೆಯನ್ನು ಅವರು ನೀಡಿದ್ದಾರೆ. ಮೇ 4ರ ಫಲಿತಾಂಶದ ನಂತರ ಈ ಪ್ರಕ್ರಿಯೆ ಚುರುಕುಗೊಳ್ಳಲಿದೆ. ಮೇ ಅಂತ್ಯದ ವೇಳೆಗೆ ಸಂಪುಟ ಪುನರ್ ರಚನೆ ಮಾಡುವ ವಿಶ್ವಾಸವಿದೆ ಎಂದರು ಮೇ 4ರ ಫಲಿತಾಂಶ ಮುಗಿದ ಬಳಿಕ ಪ್ರಕ್ರಿಯೆ ಶುರು ಮಾಡೋದಾಗಿ ಸುರ್ಜೇವಾಲ ಹೇಳಿದ್ದಾರೆ.

ಸುರ್ಜೇವಾಲ 4 ಜನ ಹಿರಿಯರನ್ನು ಬಿಟ್ಟು 30 ಜನ ಸಚಿವರನ್ನ ಬದಲಾವಣೆ ಮಾಡುವುದಾಗಿ ನಮ್ಮ ಬಳಿ

### ಸಿಡಿಲು ಬಡಿದು 60 ಕುರಿ ಸಾವು

ಯಾದಗಿರಿ: ಸಿಡಿಲು ಬಡಿದು 60 ಕುರಿಗಳು ಸಾವನ್ನಪ್ಪಿರುವ ಘಟನೆ ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಬುದುರು ಗ್ರಾಮದಲ್ಲಿ ನಡೆದಿದೆ. ಕುರಿಗಾಹಿಗಳಾದ ಮಲ್ಲಪ್ಪ, ಜಲ್ಲಪ್ಪ ಎಂಬುವವರಿಗೆ ಸೇರಿದ 60 ಕುರಿಗಳು ಮೃತಪಟ್ಟಿವೆ. ಜಿಲ್ಲೆಯಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ. ಈ ವೇಳೆ ಕುರಿಗಳನ್ನು ಹೊಡೆದುಕೊಂಡು ಬರುವಾಗ ಈ ಅವಘಡ ಸಂಭವಿಸಿದೆ. ಗುರುಮಠಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

# ತಿರುಪತಿ ಲಡ್ಡುಗೆ 2 ಲಕ್ಷ ಕೆಜಿ ತುಪ್ಪ

## ಬಮುಲ್– ಟಿಟಿಡಿ ಒಪ್ಪಂದ: ಡಿ.ಕೆ.ಸುರೇಶ್ ಮಾಹಿತಿ

ಬೆಂಗಳೂರು: ಬೆಂಗಳೂರು ಸಹಕಾರಿ ಹಾಲು ಒಕ್ಕೂಟದಿಂದ (ಬಮುಲ್) ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಲಡ್ಡು ಪ್ರಸಾದಕ್ಕೆ ನಂದಿನಿ ತುಪ್ಪ ಪೂರೈಸುವ ಮಹತ್ವದ ಒಪ್ಪಂದವನ್ನು ಮಾಡಿಕೊಂಡಿದೆ.



ಈ ಒಪ್ಪಂದದ ಅಡಿಯಲ್ಲಿ, ಬಮುಲ್ ಮುಂದಿನ ಆರು ತಿಂಗಳ ಅವಧಿಗೆ ಸುಮಾರು 2 ಲಕ್ಷ ಕೆಜಿ ತುಪ್ಪವನ್ನು ಟಿಟಿಡಿಗೆ ಸರಬರಾಜು ಮಾಡಲಿದೆ. ಪ್ರತಿ ದಿನ 11.5ರಿಂದ 12 ಟನ್ ನಂದಿನಿ ತುಪ್ಪವನ್ನು ತಿರುಪತಿಗೆ ಕಳುಹಿಸಲಾಗುವುದು ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ತಿಳಿಸಿದರು. ಸುಮಾರು 136 ಕೋಟಿ ರೂ. ವೆಚ್ಚದಲ್ಲಿ ತುಪ್ಪ ಪೂರೈಕೆ ಮಾಡುತ್ತೇವೆ. ನಂದಿನಿ ತುಪ್ಪವು ಗುಣಮಟ್ಟಕ್ಕೆ ಹೆಸರುವಾಸಿಯಾಗಿದೆ. ಗ್ರಾಹಕರ ವಿಶ್ವಾಸಗಳಿಸಿದೆ. ಕಲಬೆರಕೆ ತಡೆಗಟ್ಟಲು ಡಿಜಿಟಲ್ ಲಾಕ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಎಂದು ಸುರೇಶ್ ತಿಳಿಸಿದ್ದಾರೆ.





ಬೆಂಗಳೂರು ಡೇರಿ ಆವರಣದಲ್ಲಿ ಬುಧವಾರ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ತಿರುಪತಿ ಲಡ್ಡು ಪ್ರಸಾದಕ್ಕಾಗಿ ನಂದಿನಿ ತುಪ್ಪದ ಗುಣಮಟ್ಟವನ್ನು ಪರಿಗಣಿಸಿ, ಟಿಟಿಡಿ ಹೆಚ್ಚಿನ ಪ್ರಮಾಣದಲ್ಲಿ ತುಪ್ಪವನ್ನು ಪೂರೈಸಲು ಬೇಡಿಕೆ ಇಟ್ಟಿದೆ. ಕೆಎಂಎಫ್ ದಿನಕ್ಕೆ ಒಂದು ಕೋಟಿಗೂ ಹೆಚ್ಚು ಲೀಟರ್ ಹಾಲು ಸಂಗ್ರಹಿಸುತ್ತಿದೆ. ಬಮೂಲ್‌ನಲ್ಲಿ 17.5 ಲಕ್ಷ ಲೀಟರ್ ಸಂಗ್ರಹವಾಗುತ್ತಿದೆ. ಮುಂದಿನ ದಿನಗಳಲ್ಲಿ ಇದನ್ನು 22ರಿಂದ 33 ಲಕ್ಷ ಲೀಟರ್‌ಗೆ

ಪುಟ 2ಕ್ಕೆ

## ಬಾಲಗರ್ಭಿಣಿಯರ ಸ್ಕ್ಯಾನಿಂಗ್:

# ಮಂಡ್ಯದಲ್ಲಿ ಮೂವರು ವೈದ್ಯರ ಬಂಧನ

ಮಂಡ್ಯ: ಭ್ರೂಣಲಿಂಗ ಪತ್ತೆಗಾಗಿ 31 ಬಾಲಗರ್ಭಿಣಿಯರಿಗೆ ಕಾನೂನು ಬಾಹಿರವಾಗಿ ಸ್ಕ್ಯಾನಿಂಗ್ ಮಾಡಿರುವ ಆರೋಪದಡಿ ಮೂವರು ವೈದ್ಯರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕೆ.ಆರ್.ಪೇಟೆಯ ಚೇತನ ಮೆಟರ್ನಿಟಿ ಸೆಂಟರ್‌ನ ಡಾ.ದಿವ್ಯಾ ಚೇತನ, ನಾವಿ ಡಯಾಗ್ನಸ್ಟಿಕ್ ಸೆಂಟರ್ ಡಾ.ಹರ್ಷಿತ್ ಮತ್ತು ಕುಶಾಲ್ ಡಯಾಗ್ನಸ್ಟಿಕ್ ಸೆಂಟರ್‌ನ ಡಾ.ಹರೀಶ್ ಬಂಧಿತ ವೈದ್ಯರು. ಇಲ್ಲಿನ ಸರ್ಕಾರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಪ್ರಿಯಾಂಕಾ ತಲೆಮರೆಸಿಕೊಂಡಿದ್ದಾರೆ. ಪೊಲೀಸರು ಶೋಧ ಮುಂದುವರಿಸಿದ್ದಾರೆ. ಪಟ್ಟಣ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ಒಟ್ಟು 17 ಆರೋಪಿಗಳ ವಿರುದ್ಧ 12 ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಸರ್ಕಾರಿ ವೈದ್ಯೆ, ಮೂವರು ಖಾಸಗಿ ವೈದ್ಯರು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಆಶಾ ಕಾರ್ಯಕರ್ತೆ ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ದೂರು ದಾಖಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲೂ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ.



ಪಟ್ಟಣದ ಎರಡು ಡಯಾಗ್ನಸ್ಟಿಕ್ ಸೆಂಟರ್‌ಗಳಲ್ಲಿ ಭ್ರೂಣಲಿಂಗ ಪತ್ತೆಗಾಗಿ ಸ್ಕ್ಯಾನಿಂಗ್ ಮಾಡಿರುವುದನ್ನು ಲೋಕಾಯುಕ್ತ ಪೊಲೀಸರು ಈಚೆಗೆ ಪತ್ತೆ ಮಾಡಿದ್ದರು. ನಾವಿ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲಿ 2024ನೇ ಸಾಲಿನಲ್ಲಿ 19 ಮತ್ತು 2025ನೇ ಸಾಲಿನಲ್ಲಿ 5 ಸೇರಿದಂತೆ ಒಟ್ಟು 24 ಬಾಲಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಲಾಗಿದೆ. ಕುಶಾಲ್ ಡಯಾಗ್ನಾಸ್ಟಿಕ್ ಸೆಂಟರ್‌ನಲ್ಲೂ 7 ಬಾಲಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿರುವ ಆರೋಪವಿದೆ.

## 15 ಲಕ್ಷ ಲಂಚ ಪಡೆಯುವಾಗ ಲೋಕಾ ಬಲೆಗೆ ಬಿದ್ದ ಅಧಿಕಾರಿ

ಬೆಂಗಳೂರು: ಬಾಕಿ ಇರುವ ಕಂದಾಯ ಪ್ರಕರಣವನ್ನು ಪರಿಹರಿಸಲು





15 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದಾಗ ಬುಧವಾರ ಕೆಐಎಡಿಬಿ ಸಹಾಯಕ ಆಯುಕ್ತ ರೆಡ್ ಹ್ಯಾಂಡ್ ಆಗಿ ಲೋಕಾಯಕ್ತ ಪೊಲೀಸ್ ಬಲೆಗೆ ಸಿಕ್ಕಿಬಿದ್ದಿದ್ದಾರೆ.

ಬೆಂಗಳೂರಿನ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ (ಕೆಐಎಡಿಬಿ) ವಿಶೇಷ ಸಹಾಯಕ ಆಯುಕ್ತ (ಉತ್ತರ) ಮತ್ತು ವಿಶೇಷ ಭೂಸ್ವಾಧೀನ ಅಧಿಕಾರಿ ಆದ ನಾಗಪ್ರಸಾದ್ ಮತ್ತು ಅವರ ಹೊರಗುತ್ತಿಗೆ ಚಾಲಕ ಕುಮಾರ್ ಅವರನ್ನು ಬಲೆಗೆ ಬೀಳಿಸಿದ ನಂತರ ಬಂಧಿಸಲಾಯಿತು. ಲೋಕಾಯುಕ್ತ ಅಧಿಕಾರಿಗಳ ಪ್ರಕಾರ, ಯಲಹಂಕದ ಅತ್ತೂರು ನಿವಾಸಿ ದೂರುದಾರ ರವಿಕುಮಾರ್ ಬೆಂಗಳೂರಿನ ಸಹಾಯಕ ಆಯುಕ್ತ (ಉತ್ತರ) ಕಚೇರಿಯ ಮುಂದೆ ಬಾಕಿ ಇರುವ ಕ್ಷಿಪ್ರ ಕಂದಾಯ ತಂಡ (ಆರ್‌ಆರ್‌ಟಿ) ಪ್ರಕರಣದಲ್ಲಿ

ಪುಟ 2ಕ್ಕೆ

## ಕಾರು ನಾಲೆಗೆ ಬಿದ್ದು ತಾಯಿ, ಮಗು ಸಾವು

ಹಾಸನ: ಸ್ವಿಫ್ಟ್ ಕಾರು ನಾಲೆಗೆ ಉರುಳಿ ಬಿದ್ದ ಪರಿಣಾಮ ಕಾರಿನಲ್ಲಿದ್ದ ತಾಯಿ ಮತ್ತು ಮಗು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಉಳಿದ ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಮಲ್ಲನಘಟ್ಟ ಗ್ರಾಮದ ಬಳಿ ನಡೆದಿದೆ.

ಮೃತರನ್ನು ಪ್ರಿಯಾಂಕ (30), ಮಗು ವೈಭವ್ (ಒಂದೂವರೆ ವರ್ಷ) ಎಂದು ಗುರುತಿಸಲಾಗಿದೆ. ಬೆಂಗಳೂರಿನ ದೇವನಹಳ್ಳಿ ನಿವಾಸಿಗಳಾದ ಮಂಜುನಾಥ್, ಪತ್ನಿ ಪ್ರಿಯಾಂಕ, ಪುತ್ರ ವೈಭವ್, ಸಂಬಂಧಿಗಳಾದ ಚಂದನ್, ದಿಲೀಪ್, ದೇವರಾಜು ಅವರು ಸ್ವಿಫ್ಟ್ ಕಾರಿನಲ್ಲಿ ಧರ್ಮಸ್ಥಳಕ್ಕೆ ಹೋಗಿ ವಾಪಾಸ್ ಆಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಹೇಮಾವತಿ ನಾಲೆಗೆ ಕಾರು ಬಿದ್ದಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಗಾಯಾಳುಗಳನ್ನು ತಾಲೂಕು ಆಸ್ಪತ್ರೆಗೆ



ದಾಖಲಿಸಲಾಗಿದೆ. ಕಾರನ್ನು ನಾಲೆಯಿಂದ ಮೇಲೆತ್ತಲಾಗಿದೆ. ಚನ್ನರಾಯಪಟ್ಟಣ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

### ಯೋಗೀಶ್‌ಗೌಡ ಕೊಲೆ

## ವಿನಯ ಕುಲಕರ್ಣಿ ಶಾಸಕತ್ವ ರದ್ದು: ಸ್ಪೀಕರ್ ಖಾದರ್

ಬೆಂಗಳೂರು: ಯೋಗೀಶ್ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ಧಾರವಾಡ ಕ್ಷೇತ್ರದ ಶಾಸಕ ವಿನಯ್



ಕುಲಕರ್ಣಿ ಶಾಸಕ ಸ್ಥಾನ ಈಗಾಗಲೇ ತಾಂತ್ರಿಕವಾಗಿ ರದ್ದಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಖಾದರ್ ಅವರು, ಈ ಪ್ರಕರಣದಲ್ಲಿ ಸಭಾಧ್ಯಕ್ಷರ ಪಾತ್ರ ಮತ್ತು ನಿಯಮಗಳ ಕುರಿತು ಎದ್ದಿರುವ ಗೊಂದಲಗಳಿಗೆ ತೆರೆ ಎಳೆದರು. ನಿಯಮದಂತೆ ರದ್ದತಿ ಸ್ವಯಂಚಾಲಿತ "ಯಾವುದೇ ಒಬ್ಬ ಜನಪ್ರತಿನಿಧಿಯು ನ್ಯಾಯಾಲಯ ದಿಂದ ಶಿಕ್ಷೆಗೆ ಒಳಗಾದ ತಕ್ಷಣ, ನಿಯಮಗಳ ಪ್ರಕಾರ ಅವರ ಶಾಸಕ ಸ್ಥಾನ ತಾನಾಗಿಯೇ


ಪುಟ 2ಕ್ಕೆ

# ರಾಜ್ಯದ ಜನರಿಗೆ 'ಕತ್ತಲು ಭಾಗ್ಯ'ದ ಭೀತಿ

## ವರುಣನ ಕೃಪೆಗಷ್ಟೇ ಕಾಯಬೇಕಾ?

**ಎಚ್ ಆರ್ ಶ್ರೀಶಾ**

ರಾಜ್ಯದಲ್ಲಿ ಇಂದು ಸುಡುಬಿಸಿಲಿನ ಪ್ರತಾಪ. ಜನ–ಜಾನುವಾರುಗಳಿಗೆ ಕುಡಿಯುವ ನೀರಿಗೂ ತತ್ವಾರ, ಇತ್ತ ಗೃಹ–ಕೈಗಾರಿಕೆಗಳಿಗೆ ವಿದ್ಯುತ್ತಿನ ಹಾಹಾಕಾರ. ಸದ್ಯದ ಬಳಕೆಯ ಪ್ರಮಾಣ ದಿನಕ್ಕೆ 350 ದಶಲಕ್ಷ ಯೂನಿಟ್ ದಾಟಿದೆ. ಅಧಿಕೃತವಾಗಿ ಘೋಷಿಸದಿದ್ದರೂ, ಹಳ್ಳಿ–ಪಟ್ಟಣಗಳಲ್ಲಿ ಅಘೋಷಿತ ಲೋಡ್ ಶೆಡ್ಡಿಂಗ್ ಇಣುಕಿ ಹಾಕಿದೆ. ವಿದ್ಯುತ್ ಇಲಾಖೆಯ ಅಧಿಕಾರಿಗಳಂತೂ ಕಚೇರಿಯಲ್ಲಿ ಕುಳಿತು ವರುಣನ ಜಪ ಮಾಡುವುದನ್ನೇ ತಮ್ಮ ಕಾಯಕ ಮಾಡಿಕೊಂಡಿದ್ದಾರೆ. ಕಳೆದ ವರ್ಷದ ಮಳೆಗಾಲದಲ್ಲಿ ಶರಾವತಿ, ಸೂಪಾ ಅಣೆಕಟ್ಟುಗಳು ತುಂಬಿದ್ದ ಕಾರಣಕ್ಕೆ ಇಂದು ದಿನಕ್ಕೆ ಕನಿಷ್ಠ 30 ದಶಲಕ್ಷ ಯೂನಿಟ್





ಜಲವಿದ್ಯುತ್ ಸಿಗುತ್ತಿದೆ. ಆದರೆ ಈ ನಿಧಿ ಇನ್ನು ಕೇವಲ 72 ದಿನಗಳಿಗಷ್ಟೇ ಸಾಕು. ಜೂನ್ ಮೊದಲ ವಾರ ಮಳೆ ಬಾರದಿದ್ದರೆ ಕತ್ತಲ ಭಾಗ್ಯ ಅನಿವಾರ್ಯ. ಕೇಂದ್ರ–ರಾಜ್ಯಗಳ ನಡುವೆ ರಾಜಕೀಯ ಬಿರುಕು ಮೊದಲಿನಿಂದಲೂ ಇದೆ. ಅದರಿಂದ ಜನ ಸಾಮಾನ್ಯರು ಪರಿತಪಿಸಬೇಕಾಗಿ ಬಂದಿದೆ. 34 ಲಕ್ಷ ಪಂಪ್‌ಸೆಟ್ ಕೆಲಸಮಾಡುತ್ತಿದ್ದರೆ, ಅದನ್ನು ಹೊರತುಪಡಿಸಿ ಹತ್ತು ಸಾವಿರ ಸೋಲಾರ್ ಪಂಪ್ಸೆಟ್ಟಳಿರುವುದು ನಿಜ, ಆದರೆ ಇನ್ನೂ 40 ಸಾವಿರ ರೈತರು ಅರ್ಜಿ ಹಿಡಿದು ಕಾಯುತ್ತಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಹಾಯಧನ ನೀಡುತ್ತೇವೆಂದು ಹೇಳುತ್ತಿದ್ದರೂ, ಸೌರಶಕ್ತಿಯ ಅಳವಡಿಕೆಯಲ್ಲಿ ನಿರೀಕ್ಷಿತ ಪ್ರಗತಿ ಕಂಡಿಲ್ಲ. ಇದಕ್ಕೆ ವಿದ್ಯುತ್ ವಿತರಣ ಕಂಪನಿಗಳ ಅಸಹಕಾರ ಮತ್ತು ಕ್ರೆಡಿಲ್ ಸಂಸ್ಥೆಯ ಜಡತ್ವವೇ ಕಾರಣ. ಎಲ್ಲಕ್ಕಿಂತ ಮಿಗಿಲಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ರಾಜಕೀಯ ಮೇಲಾಟ ಇಂದಿನ ಈ ದುಸ್ಥಿತಿಗೆ ಪ್ರಮುಖ ಕಾರಣವಾಗಿದೆ. ಜನಪರ ಯೋಜನೆಗಳಿಗಿಂತಲೂ ಪರಸ್ಪರ ಕಾಲೆಳೆಯುವುದೇ ರಾಜಕೀಯ ಪಕ್ಷಗಳ ಗುರಿಯಾದಾಗ ಸಾರ್ವಜನಿಕರ ಹಿತ ಬಲಿಕೊಡಲಾಗುತ್ತಿದೆ. ಗ್ಯಾರಂಟಿ ಆಮಿಷ ಮತ್ತು ಸೌರಶಕ್ತಿಯ ಹಿನ್ನಡೆ ರಾಜ್ಯ ಸರ್ಕಾರದ

ಪುಟ 2ಕ್ಕೆ

### ಹೊರರಾಜ್ಯಗಳಿಂದ ವಿದ್ಯುತ್ ಖರೀದಿ

ವಿದ್ಯುತ್ ಅಭಾವವನ್ನು ನೀಗಿಸಲು ಹೊರರಾಜ್ಯಗಳಿಂದ ದುಬಾರಿ ದರಕ್ಕೆ ವಿದ್ಯುತ್ ಖರೀದಿ ಮಾಡಲಾಗುತ್ತಿದೆ. ಇದರ ಹೊರೆ ಅಂತಿಮವಾಗಿ ಗ್ರಾಹಕರ ಮೇಲೆ ಬೀಳಲಿದೆ. ಇತ್ತೀಚಿನ ಬೆಸ್ಕಾಂ ದರ ಏರಿಕೆಯೇ ಇದಕ್ಕೆ ಸಾಕ್ಷಿ. ರಾಜಕಾರಣಿಗಳು 'ಗ್ಯಾರಂಟಿ'ಗಳ ಮೂಲಕ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳಬಹುದು ಎಂದು ನಿರಾಳವಾಗಿದ್ದರೆ, ಇತ್ತ ಕೈಗಾರಿಕೆಗಳು ಮತ್ತು ವಾಣಿಜ್ಯ ಬಳಕೆದಾರರು ದುಬಾರಿ ಬಿಲ್ ಪಾವತಿಸಲಾಗದೆ ಪಕ್ಕದ ರಾಜ್ಯಗಳ ಸ್ಪರ್ಧೆ ಎದುರಿಸಲಾಗದೆ ಪರದಾಡುತ್ತಿದ್ದಾರೆ.

### ಪರ್ಯಾಯ ದಾರಿ ಕಾಣದಾಗಿದೆ.

ಪರಿಸರ ಆತಂಕ ಮತ್ತು ಅನಿವಾರ್ಯದ ದಾರಿ ಕೃಷಿ ಕ್ಷೇತ್ರಕ್ಕೆ ಬೇಕಾದ ಶೇ.43 ರಷ್ಟು ವಿದ್ಯುತ್ ಒದಗಿಸುವುದು ಇಂದಿನ ಸವಾಲು. ಶರಾವತಿಯಲ್ಲಿ 'ಪಂಪ್ಡ್ ಸ್ಟೋರೇಜ್' ವ್ಯವಸ್ಥೆ ತರಲು ಸರ್ಕಾರ ಮುಂದಾಗಿದೆಯಾದರೂ, ಪರಿಸರ ಪ್ರೇಮಿಗಳ ವಿರೋಧ ಮತ್ತು ವನ್ಯಜೀವಿ ಮಂಡಳಿಯ ತಡೆಯಾಜ್ಞೆ ಎದುರಾಗಿದೆ. ಪರಿಸರದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಆತಂಕವಿದ್ದರೂ, ಕತ್ತಲೆಯಲ್ಲಿ ಮುಳುಗುತ್ತಿರುವ ಜನತೆಗೆ ಪರ್ಯಾಯ ದಾರಿಯೇ ಕಾಣದಂತಾಗಿದೆ. ಹುಳಿಯಾರು ಅಥವಾ ಪಾವಗಡದ ಬ್ಯಾಟರಿ ಸ್ಥಾಪನೆಯ ಯೋಜನೆಗಳು ಕಾಗದದ ಮೇಲಷ್ಟೇ ಉಳಿಯದೆ ಶೀಘ್ರ ಜಾರಿಗೆ ಬರಬೇಕಿದೆ.

# ವೈದ್ಯರ ಸಲಹಾ ಚೀಟಿ ಇಲ್ಲದೆ ಔಷಧಿ ಮಾರಾಟ ಮಾಡಿದರೆ ಕ್ರಮ: ಡಿಸಿ



ಮೈಸೂರು: ಔಷಧ ಮಾರಾಟ ಅಂಗಡಿಗಳು ಔಷಧ ಮತ್ತು ಕಾಂತಿವರ್ಧಕ ಅದಿನಿಯಮ 1940ರ ಅನುಸೂಚಿ ಎಚ್, ಎಚ್ 1ಮತ್ತು ಎಕ್ಸ್ ಅಡಿಯಲ್ಲಿ ಬರುವ ಮತ್ತು ಬರಿಸುವ, ಅಮಲುಕಾರಕ, ರೋಗನಿರೋಧಕ ಮತ್ತು ಇತರೆ ಔಷಧಿಗಳನ್ನು ವೈದ್ಯರ ಸಲಹಾ ಚೀಟಿ ಇಲ್ಲದೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ನಾರ್ಕೋ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಎಚ್ಚರಿಕೆ ನೀಡಿದರು.

ನಗರದ ನ್ಯೂ ಸ್ಯಯಾಜಿರಾವ್ ರಸ್ತೆಯಲ್ಲಿರುವ ರಘುಲಾಲ್ ಔಷಧ ಮಾರಾಟ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿ ಔಷಧ ಮತ್ತು ಕಾಂತಿ ವರ್ಧಕ ನಿಯಮ 1940ರ ಅನುಸೂಚಿ ಎಚ್,ಎಚ್1 ಮತ್ತು ಎಕ್ಸ್ ಅಡಿ ಬರುವ ಔಷಧಗಳ ಮಾರಾಟದ ಬಿಲ್, ವೈದ್ಯರ ಸಲಹಾ ಚೀಟಿ ಪಡೆದು ಪರಿಶೀಲನೆ ನಡೆಸಿದರು. ನಂತರ ಮಾತನಾಡಿ ಅಮಲುಕಾರಕ ರೀತಿಯ ಔಷಧಿಗಳನ್ನು ವೈದ್ಯರ ಸಲಹಾ ಚೀಟಿ ಇಲ್ಲದೆ ಖರೀದಿಸಿ ಯುವ ಜನತೆ ಮಾದಕ ವಸ್ತುಗಳ ಬಳಕೆಯ ಜಾಲದಲ್ಲಿ ಸಿಲುಕುತ್ತಿದ್ದಾರೆ. ಔಷಧ ಮಾರಾಟ ಮಳಿಗೆಗಳು ಜಿಲ್ಲಾಡಳಿತ ಹಾಗೂ ಸರ್ಕಾರದಿಂದ ನೀಡಲಾಗುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಔಷಧ ಮಾರಾಟ ಅಂಗಡಿಗಳ ಮುಂಭಾಗದಲ್ಲಿ ಸಾರ್ವಜನಿಕರಿಗೆ ಕಾಣುವ ರೀತಿ ಎಚ್, ಎಚ್1 ಮತ್ತು ಎಕ್ಸ್ ಅಡಿ ಬರುವ ಔಷಧಿಗಳ ಖರೀದಿಗೆ ವೈದ್ಯರ ಸಲಹಾ ಚೀಟಿ ಕಡ್ಡಾಯ ಎಂದು ಪ್ರಕಟಿಸಬೇಕು ಎಂದರು.

ಔಷಧ ಮತ್ತು ಕಾಂತಿ ವರ್ಧಕ ನಿಯಮ 1940ರ




ಅನುಸೂಚಿ ಎಚ್, ಎಚ್1 ಮತ್ತು ಎಕ್ಸ್ ಅಡಿ ಅಲ್ಪ್ರಜೋಲಮ್, ಕೊಡೈನ್, ಟಪೆಂಟಾಲ್ ಸೇರಿ ಒಟ್ಟು 50 ವಿದಧ ಔಷಧಿಗಳಿವೆ. ಅವುಗಳ ಸ್ಟಾಕ್, ಮಾರಾಟ, ವೈದ್ಯರ ಸಲಹಾ ಚೀಟಿ ಹಾಗೂ ಬಿಲ್ ಗಳ ದಾಖಲೆಗಳನ್ನು ಔಷಧಿ ಮಾರಾಟ ಮಳಿಗೆಗಳು ಇಡಬೇಕು. ಅಧಿಕಾರಿಗಳು ಪರಿಶೀಲನೆಗೆ ಬಂದ ಸಂದರ್ಭದಲ್ಲಿ ಹಾಜರುಪಡಿಸಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲ ದಂಡಿ ಮಾತನಾಡಿ ಜಿಲ್ಲೆಯಲ್ಲಿ ಬಹಳಷ್ಟು ಔಷಧಿ ಮಾರಾಟ ಕೇಂದ್ರಗಳಿದ್ದು, ಎಲ್ಲವನ್ನೂ ಔಷಧೀಯ ನಿಯಂತ್ರಕರು ಪರಿಶೀಲಿಸುವುದು ಕಷ್ಟವಾಗಿದ್ದು, ಪೊಲೀಸ್ ಇಲಾಖೆಯಿಂದಲೂ ಪರಿಶೀಲನೆಯನ್ನು ತೀವ್ರಗೊಳಿಸಲಾಗುವುದು ಎಂದರು. ಪರಿಶೀಲನೆಯ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಸಹಾಯಕ ಔಷಧ ನಿಯಂತ್ರಕ ಆಶಾ, ಲತಾ ಹಾಗೂ ವಾಸೀಂ ಶರೀಫ್ ಉಪಸ್ಥಿತರಿದ್ದರು.

# ಕುಡಿಯುವ ನೀರಿನ ಕೊರತೆಯಾಗದಿರಲಿ

## ಅಧಿಕಾರಿಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

## ಸರ್ಕಾರದ ಸವಲತ್ತು ಫಲಾನುಭವಿಗಳನ್ನು ತಲುಪಿರುವುದನ್ನು ಪರಿಶೀಲಿಸಲು



ರಾಮನಗರ/ಕನಕಪುರ: ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಉಪಮುಖ್ಯಮಂತ್ರಿಗಳು ಹಾಗೂ ಕನಕಪುರ ಕ್ಷೇತ್ರದ ಶಾಸಕ ಡಿ.ಕೆ. ಶಿವಕುಮಾರ್ ಸೂಚಿಸಿದರು.

ಜಿಲ್ಲೆಯ ಕನಕಪುರದ ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಕನಕಪುರ ತಾಲೂಕು ಮಟ್ಟದ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆ ಮತ್ತು ಇತರ ಸವಲತ್ತುಗಳನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪಿಸುವ ಂತಹ ಕೆಲಸಗಳನ್ನು ಮಾಡಬೇಕು ನಂತರ ಆ ಸವಲತ್ತುಗಳು ಫಲಾನುಭವಿಗಳಿಗೆ ತಲುಪಿದೆಯೇ ಎಂಬುದರ ಕುರಿತು ಫಲಾನುಭವಿಗಳನ್ನು ಭೇಟಿ ಮಾಡಿ ಅವರ ಅಭಿಪ್ರಾಯ ಪಡೆದು ವೀಡಿಯೋ ಚಿತ್ರೀಕರಣ ಮಾಡಿಕೊಳ್ಳಬೇಕು, ಫಲಾನುಭವಿಗಳು ಸವಲತ್ತುಗಳನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಮಧ್ಯವರ್ತಿಗಳು ಹಾಗೂ ಅಧಿಕಾರಿಗಳು ಹಣ ಪಡೆದುಕೊಂಡಿದ್ದರೆ ಆ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಸಭಾಂಗಣ ಉದ್ಘಾಟನೆ**

ಇದೇ ದಿನ ಉಪಮುಖ್ಯಮಂತ್ರಿಗಳು ಕನಕಪುರದ ತಾಲ್ಲೂಕು ಪಂಚಾಯತ್ ಕಟ್ಟಡದಲ್ಲಿ ನೂತನ ಸಭಾಂಗಣವನ್ನು ಉದ್ಘಾಟಿಸಿದರು.

### ಮಧ್ಯವರ್ತಿಗಳು ಪತ್ತೆಯಾದರೆ ಕ್ರಮ ಕೈಗೊಳ್ಳಲು ಸೂಚನೆ

ಸರ್ಕಾರದ ಸವಲತ್ತುಗಳನ್ನು ಫಲಾನುಭವಿಗಳಿಗೆ ತಲುಪಿಸುವ ಸಂದರ್ಭದಲ್ಲಿ ಮಧ್ಯವರ್ತಿಗಳು ಪತ್ತೆಯಾದರೆ ಅಥವಾ ಯಾರಾದರು ಹಣ ಪಡೆದಿದ್ದರೆ ಅಂತಹ ಅಧಿಕಾರಿ, ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಕೆಲಸದ ಒತ್ತಡ ಹೆಚ್ಚಿದ್ದು, ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಅವರು ತಿಳಿಸಿದರು.

### ತುಂಗಣಿ ರಾಯಸಂದ್ರದಲ್ಲೂ ಮೆಡಿಕಲ್ ಕಾಲೇಜು

ಬೆಂಗಳೂರು ದಕ್ಷಿಣ ಜಿಲ್ಲೆ ವಿಶೇಷವಾದ ಜಿಲ್ಲೆಯಾಗಿದೆ. ಇದು ಬಹಳ ಬಲಿಷ್ಠವಾದ ನಾಯಕರುಗಳನ್ನು ನೀಡಿರುವ ಜಿಲ್ಲೆ. ಚನ್ನಪಟ್ಟಣಕ್ಕೆ ಖಾಸಗಿ ಮೆಡಿಕಲ್ ಕಾಲೇಜು, ರಾಮನಗರದಲ್ಲಿ ವೈದ್ಯಕೀಯ ವಿಶ್ವವಿದ್ಯಾಲಯ, ಹಾರೋಹಳ್ಳಿಯಲ್ಲಿ ಖಾಸಗಿ ಮೆಡಿಕಲ್ ಕಾಲೇಜು ನಿರ್ಮಾಣವಾಗುತ್ತಿದ್ದು, ತುಂಗಣಿಯ ರಾಯ ಸಂದ್ರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಶಂಕುಸ್ಥಾಪನೆ ಮಾಡಲಾಗುವುದು. ಜನರ ಆರೋಗ್ಯದ ಹಿತದೃಷ್ಟಿಯಿಂದ ಜಿಲ್ಲೆಯಲ್ಲಿ ನಾಲ್ಕು ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.

### ರಾಮನಗರದಲ್ಲೂ ರಸ್ತೆ ಅಗಲೀಕರಣ

ಕನಕಪುರದಲ್ಲಿ ರಸ್ತೆ ಅಗಲೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ರಾಮನಗರದ ರಸ್ತೆಗಳನ್ನು ಅಗಲೀಕರಣ ಮಾಡಲು ಸರ್ಕಾರದಿಂದ ಹಣ ಮಂಜೂರು ಮಾಡಲು ಕ್ರಮ ವಹಿಸಲಾಗುವುದು. ಕನಕಪುರ ಟೌನಿಗೆ ರಿಂಗ್ ರೋಡ್ ಮಾಡಲು ಸಿದ್ಧತೆ ಕೈಗೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಎಸ್. ರವಿ, ಸುಧಾಮ್ ದಾಸ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಕೆ. ರಾಜು, ಬಮುಲ್ ಅಧ್ಯಕ್ಷರಾದ ಡಿ.ಕೆ. ಸುರೇಶ್ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅನ್ಮೋಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ ವೇದಿಕೆಯಲ್ಲಿದ್ದರು. ಕನಕಪುರ ತಾಲ್ಲೂಕು ತಹಶೀಲ್ದಾರ್ ಸಂಜಯ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಅಭಿಲಾಷ್, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಸಂಪರ್ಕದ ನೂತನ ವಾಹನಕ್ಕೆ ಉಪಮುಖ್ಯಮಂತ್ರಿಗಳು ಚಾಲನೆ ಕೊಟ್ಟರು. ಈ ವೇಳೆ ಗಣ್ಯರು ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ರವಿರಾಜ್ ಎಚ್.ಜಿ. ಹಾಜರಿದ್ದರು.

# ಮೊದಲ ಪುಟದಿಂದ

## ಲೋಕಾ ಬಲೆಗೆ ಬಿದ್ದ ಅಧಿಕಾರಿ

ಅನುಕೂಲಕರ ಆದೇಶವನ್ನು ನೀಡಲು ಅಧಿಕಾರಿ 30 ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿ ಲೋಕಾಯುಕ್ತರನ್ನು ಸಂಪರ್ಕಿಸಿದ್ದರು. ಅಧಿಕಾರಿಯ ಸೂಚನೆ ಮೇರೆಗೆ ಚಾಲಕ ಈ ಹಿಂದೆ 15 ಲಕ್ಷ ರೂ.ಗಳನ್ನು ಸ್ವೀಕರಿಸಿದ್ದರು. ಇಂದು ನಾಗಪ್ರಸಾದ್ ಸೂಚನೆಯ ಮೇರೆಗೆ ಕುಮಾರ್ ಮತ್ತೆ 15 ಲಕ್ಷ ರೂ. ಸ್ವೀಕರಿಸಿದ್ದಾರೆ. ಕಾರ್ಯಾಚರಣೆಯ ಸಮಯದಲ್ಲಿ ಇಬ್ಬರೂ ಆರೋಪಿಗಳನ್ನು ಬಂಧಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

## ಖರ್ಗೆ ಸಿಎಂ ಆದರೆ ಸ್ವಾಗತ!

ವಲಯ ಗಳಲ್ಲಿ ಹರಿದಾಡುತ್ತಿರುವ ಊಹಾಪೋ ಹಗಳ ನಡುವೆ ಅವರು ಈ ಹೇಳಿಕೆ ನೀಡಿದ್ದಾರೆ.

ಖರ್ಗೆ ಮುಖ್ಯಮಂತ್ರಿಯಾದರೆ ನಾವು ತುಂಬಾ ಸಂತೋಷಪಡುತ್ತೇವೆ. ಏಕೆಂದರೆ ಅವರು ಸಾಕಷ್ಟು ಅನುಭವ ಹೊಂದಿರುವ ಹಿರಿಯ ರಾಜಕಾರಣಿ. ಹೀಗಾಗಿ ನಾವೆಲ್ಲರೂ ಅವರನ್ನು ಸ್ವಾಗತಿಸುತ್ತೇವೆ. ಪಕ್ಷದೊಳಗಿನ ಆಂತರಿಕ ರಾಜಕೀಯ ಮತ್ತು ಗೊಂದಲಗಳ ಮಧ್ಯೆ, ರಾಜ್ಯದ ಜನರಿಗೆ ನೀಡಿದ ಉತ್ತಮ ಆಡಳಿತದ ಭರವಸೆಯನ್ನು ಈಡೇರಿಸುವುದು ಮುಖ್ಯ ಎಂದು ಅವರು ಪ್ರತಿಪಾದಿಸಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಅಥವಾ ಸಚಿವ ಸಂಪುಟ ಪುನಾರಚನೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ರಾಜ್ಯದ ಎಲ್ಲಾ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ಇದೆ. ಶೀಘ್ರದಲ್ಲೇ ತೀರ್ಮಾನ ಕೈಗೊಳ್ಳಲಾಗುತ್ತದೆ ಮತ್ತು ಅದನ್ನು ಎಲ್ಲರೂ ಪಾಲಿಸಬೇಕಾಗುತ್ತದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿಗರು ಪದೇ ಪದೇ ದೆಹಲಿಗೆ ಭೇಟಿ ನೀಡುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿ, ಅಭಿವೃದ್ಧಿ ಕೆಲಸಗಳು ಹಾಗೂ ಇಲಾಖೆಗಳಿಗೆ ಅನುದಾನ ಕೇಳಲು ಕೇಂದ್ರ ಸಚಿವರು ಮತ್ತು ಅಧಿಕಾರಿಗಳನ್ನು ಭೇಟಿ ಮಾಡಲು ಸಚಿವರು ದೆಹಲಿಗೆ ಹೋಗುವುದು ಸಹಜ ಎಂದು ಹೇಳಿದರು.

ಪಕ್ಷದ ಹೈಕಮಾಂಡ್ ಅನ್ನು ನಮ್ಮ ನಾಯಕರು ದೇವಾಲಯದಂತೆ ಕಾಣುವ ಕಾರಣ, ದೆಹಲಿ ಭೇಟಿ ವೇಳೆ ಹೈಕಮಾಂಡ್ ಅನ್ನೂ ಭೇಟಿ ಮಾಡುತ್ತಾರೆ. ಅದರಲ್ಲೇನೂ ವಿಶೇಷವಿಲ್ಲ ಎಂದು ತಿಳಿಸಿದರು.

## ದಲಿತ ಸಿಎಂ ಮುನ್ನೆಲೆಗೆ ಸಹಜ

ಹುಟ್ಟುಹಬ್ಬಕ್ಕೆ ಹೈಕಮಾಂಡ್‌ನಿಂದ ಗುಡ್ ನ್ಯೂಸ್ ಸಿಗಲಿದೆ ಎಂಬ ವಿಚಾರಕ್ಕೆ ಅವರು ಪ್ರತಿಕ್ರಿಯಿಸಿದರು. ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ಅದಕ್ಕೆ ಎಲ್ಲರೂ ಬದ್ಧರಾಗಿರುತ್ತೇವೆ ಎಂದರು. ಸಿಎಂ ಬದಲಾವಣೆ ಹಾಗೂ ಸಂಪುಟ ವಿಸ್ತರಣೆ ವಿಚಾರವಾಗಿ ನವೆಂಬರ್‌ನಿಂದಲೂ ಹೇಳುತ್ತಿದ್ದಾರೆ. ನಾನೂ ಅದಕ್ಕೆಲ್ಲ ಉತ್ತರ ಕೊಟ್ಟುಕೊಂಡು ಬರುತ್ತಿದ್ದೇನೆ. ಈ ವಿಚಾರದಲ್ಲಿ ಏನು ಹೇಳಬೇಕೋ ಈಗಾಗಲೇ ಎಲ್ಲಾ ಹೇಳಿ ಆಗಿದೆ. ನಾನು ಈ ವಿಷಯವಾಗಿ ಏನು ಮಾತನಾಡುವುದಿಲ್ಲ. ಏನೇ ಇದ್ದರೂ ಸಿಎಂ ಹಾಗೂ ಹೈಕಮಾಂಡ್‌ನ್ನೇ ಕೇಳಬೇಕು ಎಂದರು.

ಖರ್ಗೆ ಅವರನ್ನು ಸಿಎಂ ಮಾಡಿದರೆ ಸ್ವಾಗತ ಎಂಬ ಪರಮೇಶ್ವರ್ ಹೇಳಿಕೆ ವಿಚಾರಕ್ಕೆ, ಹೈಕಮಾಂಡ್ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ಅದಕ್ಕೆ ಬದ್ಧ. ಸಚಿವ ಮಹದೇವಪ್ಪ ಮನೆಯಲ್ಲಿ ನಡೆದಿದೆ ಎನ್ನಲಾದ ಡಿನ್ನರ್ ಮೀಟಿಂಗ್ ಬಗ್ಗೆ ನನಗೆ ಮಾಹಿತಿ ಇಲ್ಲ. ಹಿರಿಯ ಶಾಸಕರು ಸಚಿವ ಸ್ಥಾನ ಕೇಳುವುದು ಸಹಜ. ಎರಡು ವರ್ಷ ಆದ್ಮೇಲೆ ಸಂಪುಟ ಪುನರ್ ರಚನೆಯಲ್ಲಿ ನಮಗೂ ಸ್ಥಾನ ಸಿಗುತ್ತದೆ ಅಂತ ಕೇಳ್ತಾರೆ. ಈ ವಿಚಾರವಾಗಿ ಶಾಸಕರು ದೆಹಲಿಗೆ ಹೋದರೆ ತಪ್ಪಿಲ್ಲ ಎಂದು ಹೇಳಿದರು.

## ಲಾಬಿ ನಡೆದಿಲ್ಲ

**ಸಿದ್ದರಾಮಯ್ಯ ಕೂಡ ಭಾಗವಹಿಸಿದ್ದಾರೆ. ಅದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದರು.**

**ಭೋಜನಕೂಟದ ವೇಳೆ ರಾಜಕೀಯ ಸೇರಿ ಹಲವು ವಿಷಯಗಳನ್ನು ಚರ್ಚಿಸುವುದು ಸಹಜ. ಅದರಲ್ಲಿ ಯಾವುದೇ ತಪ್ಪಿಲ್ಲ.**

**ಸಮುದಾಯದ ಯಾವುದೇ ನಾಯಕನನ್ನು ಮುಖ್ಯಮಂತ್ರಿ ಮಾಡಿ ಎಂದು ನಾವು ಹೈಕಮಾಂಡ್‌ಗೆ ಕೇಳಿಲ್ಲ. ಅಂತಿಮ ತೀರ್ಮಾನ ಕಾಂಗ್ರೆಸ್ ಹೈಕಮಾಂಡ್ ಗೆ ಸೇರಿದೆ ಎಂದು ತಿಳಿಸಿದರು.**

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## 7 ಮಂದಿ ದುರ್ಮರಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಗೋಡೆ ಕುಸಿದಿರುವ ಬಗ್ಗೆ ತನಿಖೆ ನಡೆಸುವುದಾಗಿ ತಿಳಿಸಿದರು.

ವಿಧಾನಸೌಧಕ್ಕೂ ನುಗ್ಗಿದ ನೀರು: ಬೆಂಗಳೂರಿನಲ್ಲಿ ಸುರಿದ ಭಾರೀ ಗಾಳಿ ಸಹಿತ ಮಳೆಯಿಂದ ವಿಧಾನಸೌಧಕ್ಕೂ ನೀರು ನುಗ್ಗಿದೆ. ವಿಧಾನ ಸೌಧದ ವಿಪಕ್ಷ ನಾಯಕ ಆರ್.ಅಶೋಕ್ ಕೊಠಡಿಗೆ ನೀರು ನುಗ್ಗಿದೆ. ಕಚೇರಿಯಲ್ಲಿ ಹಲವು ವಸ್ತುಗಳು ಹಾನಿಯಾಗಿವೆ. ಹವಾಮಾನ ಇಲಾಖೆಯು ಏಪ್ರಿಲ್ 29 ಮತ್ತು 30ರಂದು ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮಳೆಯಾಗುವುದಾಗಿ ಸೂಚನೆ ನೀಡಿತ್ತು. ಜೊತೆಗೆ ಆರೆಂಜ್ ಅಲರ್ಟ್ ಸಹ ಮಾಡಿತ್ತು. ಇದೀಗ ಬೆಂಗಳೂರು ಸುತ್ತಮುತ್ತ ಮಳೆಯಾಗಿರುವುದರಿಂದ ವಾತಾವರಣ ತಂಪಾಗಿದೆ. ಏಕಾಏಕಿ ಸುರಿದ ಮಳೆಯಿಂದಾಗಿ ನಗರದ ಕೆಲವೆಡೆ ವಾಹನ ಸಂಚಾರದಲ್ಲಿ ವ್ಯತ್ಯಯ ಆಯಿತು. ಹೀಗಾಗಿ ಸಂಜೆ ವೇಳೆ ಮನೆ ಕಡೆ ತೆರಳುತ್ತಿದ್ದವರು ಟ್ರಾಫಿಕ್ ನಲ್ಲಿ ಸಿಲುಕಿ ಸಂಕಷ್ಟ ಎದುರಿಸಿದರು.

## ಲಡ್ಡುಗೆ 2 ಲಕ್ಷ ಕೆಜಿ ತುಪ್ಪ

ಹೆಚ್ಚಿಸುವ ಗುರಿ ಹೊಂದಲಾಗಿದೆ. ತಿರುಪತಿ ಲಡ್ಡುವಿಗೆ ನಂದಿನಿ ತುಪ್ಪ ಮರಳಿರುವುದು ಕನ್ನಡಿಗರಿಗೆ ಮತ್ತೊಂದು ಹೆಮ್ಮೆ ತಂದಿದೆ. ರಾಜ್ಯದ ಹಾಲು ಉತ್ಪಾದಕರಿಗೆ ಹೊಸ ಆತ್ಮವಿಶ್ವಾಸ ತುಂಬಿದೆ ಎಂದು ಹೇಳಿದರು.

## ಶಾಸಕತ್ವ ರದ್ದು: ಸ್ಪೀಕರ್ ಖಾದರ್

ರದ್ದಾಗುತ್ತದೆ. ಇದನ್ನು ರದ್ದು ಮಾಡುವ ವಿಶೇಷ ಅಧಿಕಾರ ಸಭಾಧ್ಯಕ್ಷರಿಗಿಲ್ಲ. ಒಂದು ವೇಳೆ ನ್ಯಾಯಾಲಯವು ಈ ಶಿಕ್ಷೆಗೆ ತಡೆಯಾಜ್ಞೆ ನೀಡಿದರೆ ಮಾತ್ರ ಅವರ ಸದಸ್ಯತ್ವ ಮರುಸ್ಥಾಪನೆಯಾಗುತ್ತದೆ," ಎಂದು ಯು.ಟಿ. ಖಾದರ್ ವಿವರಿಸಿದರು.

# ತಂಬಾಕು ಖರೀದಿ ಸಮಸ್ಯೆ: ಕೇಂದ್ರಕ್ಕೆ ಸಂಸದರ ಮನವಿ



ಮೈಸೂರು: ತಂಬಾಕು ಬೆಳೆಗಾರರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಪರಿ ಹರಿಸಲು, ಹರಾಜು ಕಾರ್ಯ ವಿಧಾ ನದಲ್ಲಿ ಸುಧಾರಣೆ ತರಲು ಎಲ್ಲ ರೀತಿಯ ಕ್ರಮ ಕೈಗೊಳ್ಳುವಂತೆ ಕೇಂದ್ರ ಸಚಿವ ರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿರುವ ಕುರಿತು ಪ್ರತಿಕ್ರಯಿಸಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರಸಕ್ತ ಋತುವಿನಲ್ಲಿ ಸಮಗ್ರ ಅವಲೋಕನ, ರೈತರು ಎದುರಿ ಸುತ್ತಿರುವ ಸವಾಲುಗಳಿಗೆ ದೀರ್ಘಾವ ಧಿಯ ರಚನಾತ್ಮಕ ಪರಿಹಾರ ಒದಗಿ ಸಲು ತುರ್ತು ಕ್ರಮ, ಏಕಸ್ವಾಮ್ಯ ನಿಯಂ ತ್ರಣ ತಪ್ಪಿಸುವುದು ಸೇರಿ ಹಲವಾರು ವಿಷಯಗಳ ಕುರಿತು ಕೇಂದ್ರ ಸಚಿವರೊಂದಿಗೆ ಚರ್ಚಿಸಲಾಯಿತು. ಹರಾಜು ಪ್ರಕ್ರಿಯೆಯಲ್ಲಿ ವಿದೇಶಿ ಖರೀದಿದಾರರ ವ್ಯಾಪಕ ಭಾಗವಹಿಸುವಿಕೆಯನ್ನು ಅನುಮತಿಸುವ ಪ್ರಾಮುಖ್ಯತೆ ಬಗ್ಗೆ ಗಮನ ಸೆಳೆಯಲಾಯಿತು. ಹೊಸ ಯೋಜನೆಗಳಿಗೆ ಚಿಂತನೆ ಅಗತ್ಯವಿದೆ. ರೈತರಿಗೆ ಪಾರದರ್ಶಕತೆ, ನ್ಯಾಯಯುತ ಬೆಲೆ ಆವಿಷ್ಕಾರ ಮತ್ತು ಸಂಗ್ರಹಣೆಯಲ್ಲಿ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಹರಾಜು ಕಾರ್ಯವಿಧಾನಗಳಲ್ಲಿ ಸುಧಾರಣೆಗಳಿಗೆ ಆದ್ಯತೆ ನೀಡಬೇಕೆಂದು ಕೋರಲಾಯಿತು.

2015 ರಲ್ಲಿ ಸಾಲ ಮನ್ನಾ ಖಾತರಿಪಡಿಸಿದ ಬಗ್ಗೆ ಕೊಡಗು ಕಾಫಿ ಸಹಕಾರಿ ಸಂಘ ಮತ್ತು ಕಾಫಿ ಮಂಡ ಳಿಯ ನಡುವೆ ದೀರ್ಘಕಾಲದಿಂದ ಬಾಕಿ ಇರುವ ಸಮಸ್ಯೆಯನ್ನು ಚರ್ಚಿಸಲಾಯಿತು. ನ್ಯಾಯಾಲಯದ ನಿರ್ದೇ ಶನ ಇರುವುದರಿಂದ ಈ ವಿಷಯದಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ. ಇದರಿಂದ ಸಣ್ಣ ಬೆಳೆಗಾರರು ಕೂರ್ಗ್, ಕೊಡಗು ಕಾಫಿ ಬ್ರ್ಯಾಂಡ್ ಅನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯಲು ಅನುಕೂಲವಾಗು ತ್ತದೆ ಮತ್ತು ಸಹಕಾರಿ ಸಂಸ್ಥೆಯನ್ನು ಬೆಂಬಲಿಸಲು ಸಕಾಲಿಕ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರು ವುದಾಗಿ ತಿಳಿಸಿದ್ದಾರೆ.

## ಜನರಿಗೆ ಕತ್ತಲು ಭಾಗ್ಯದ ಭೀತಿ

'ಗೃಹಜ್ಯೋತಿ' ಯೋಜನೆಯಿಂದ 1.60 ಕೋಟಿ ಜನರಿಗೆ ಉಚಿತ ವಿದ್ಯುತ್ ಸಿಗುತ್ತಿದೆ ನಿಜ. ಆದರೆ ಈ ಉಚಿತದ ಆಮಿಷವು ಕೇಂದ್ರ ಸರ್ಕಾರದ ಸೌರ ಸಬ್ಸಿಡಿ ಯೋಜನೆಗೆ ಕೊಳ್ಳಿ ಇಟ್ಟಿದೆ. ಉಚಿತವಾಗಿ ವಿದ್ಯುತ್ ಸಿಗುತ್ತಿರುವಾಗ ಹಣ ಖರ್ಚು ಮಾಡಿ ಸೌರ ಫಲಕ ಏಕೆ ಅಳವಡಿಸಬೇಕು ಎನ್ನುವ ಉದಾಸೀನತೆ ಜನರಲ್ಲಿ ಮೂಡಿದೆ. ಇನ್ನು ನಗರಗಳಲ್ಲಿ ಸೌರ ಸಬ್ಸಿಡಿ ನಿಲ್ಲಿಸಿರುವುದು ಗಾಯದ ಮೇಲೆ ಬರೆ ಎಳೆದಂತಿದೆ. ಹೆಚ್ಚುವರಿ ಸೌರ ವಿದ್ಯುತ್ತನ್ನು ಗ್ರಿಡ್ಗೆ ನೀಡಿ ದರ ಕಡಿತಗೊಳಿಸುವ ವ್ಯವಸ್ಥೆಯು ಅತ್ಯಂತ ಜಟಿಲವಾಗಿದ್ದು, ಗ್ರಾಹಕರಿಗೆ ಈ ಕಂಪನಿಗಳ ಮೇಲೆ ವಿಶ್ವಾಸವೇ ಇಲ್ಲದಂತಾಗಿದೆ. ಎಲ್ಪಿಜಿ ಕೊರತೆಯ ಈ ಕಾಲದಲ್ಲಿ ಸೌರಶಕ್ತಿಗೆ ಒತ್ತು ನೀಡುವ ಬದಲು, ರಾಜಕೀಯ ಪಕ್ಷಗಳು ತಮ್ಮ ನೀತಿಗಳನ್ನು ಬದಲಿಸುತ್ತಾ ಜನಸಾಮಾನ್ಯರನ್ನು ಸಂಕಷ್ಟಕ್ಕೆ ನೂಕುತ್ತಿವೆ.

ಕೊನೆಯದಾಗಿ, ಜನತಂತ್ರದಲ್ಲಿ ಪ್ರಜೆಯೇ ಪರಮ ಪ್ರಭು. ಸರ್ಕಾರಗಳು ಸದಾ ಜಾಗೃತಿಯಿಂದ ಕಾರ್ಯನಿರ್ವಹಿಸಬೇಕು. ಮಳೆ ಬಂದು ಅಣೆಕಟ್ಟುಗಳು ತುಂಬಿದರೆ ಯೂನಿಟ್ಗೆ 30 ಪೈಸೆಯಲ್ಲಿ ಸಿಗುವ ವಿದ್ಯುತ್ತನ್ನು ಬಿಟ್ಟು, ನೂರಾರು ಕೋಟಿ ಸುರಿದು ಹೊರಗಿನಿಂದ ಖರೀದಿಸುವುದು ಆಡಳಿತದ ವೈಫಲ್ಯವಲ್ಲದೆ ಮತ್ತೇನು? ಹೀನ ರಾಜಕಾರಣಕ್ಕೆ ಇತಿಶ್ರೀ ಹಾಡಿ, ಶಾಶ್ವತ ಪರಿಹಾರದತ್ತ ಸರ್ಕಾರಗಳು ಗಮನಹರಿಸದಿದ್ದರೆ ಮುಂದಿನ ಹಾದಿ ಅತ್ಯಂತ ಕಠಿಣವಾಗಲಿದೆ.

# ಟಾಪರ್ ಮಾಧುರಿಗೆ ಗ್ಯಾರಂಟಿ ಸಮಿತಿ ಅಭಿನಂದನೆ



ಮೈಸೂರು: ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 2ನೇ ಸ್ಥಾನ ಪಡೆದಿರುವ ಕುಮಾರಿ ಮಾಧುರಿ ಅವರ ಮನೆಗೆ ಮಂಗಳವಾರ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯು ಭೇಟಿ ನೀಡಿ ಅಭಿನಂದಿಸಿತು.

ಮಾಧುರಿ ಅವರ ತಾಯಿ ಸರಿತಾ ಗೃಹಲಕ್ಷ್ಮಿ ಸೇರಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆಯು ತ್ತಿದ್ದು, ಮಗಳ ವಿದ್ಯಾಭ್ಯಾಸಕ್ಕೆ ಬೇಕಿರುವ ಪೂರಕ ಸಾಮಗ್ರಿಗಳನ್ನು ಖರೀದಿಸಲು ಗೃಹಲಕ್ಷ್ಮಿ ಯೋಜನೆ ಸಹಕಾರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಬಳಿಕ ಉಪಾಧ್ಯಕ್ಷೆ ಪುಷ್ಪ ಅಮರನಾಥ್ ಮಾತನಾಡಿ,


ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರ ಬದುಕಿನಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಬದ ಲಾವಣೆಯ ಬೆಳಕಾಗಿದೆ. ಇದಕ್ಕೆ ಅನೇಕ ಫಲಶೃತಿಗಳು ನಮ್ಮ ಕಣ್ಮೂಂದೆ ಇವೆ. ಇದಕ್ಕೆ ಹೊಸದಾಗಿ ಸೇರ್ಪ ಡೆಯಾಗಿರುವುದು ಗೃಹಲಕ್ಷ್ಮಿ ಯೋಜನೆಯ ಹಣದ ಸಹಾಯದಿಂದ ಮಾಧುರಿ ಎಂಬ ವಿದ್ಯಾರ್ಥಿನಿ 10ನೇ ತರಗತಿಯಲ್ಲಿ 2ನೇ ಸ್ಥಾನ ಪಡೆದಿರುವುದು ಎಂದರು.

ಈಕೆಯಂತೆ ಅನೇಕ ಮಕ್ಕಳ ಬದುಕಿನಲ್ಲಿ ಗ್ಯಾರಂಟಿ ಯೋಜನೆಗಳು ಬೆಳಕಾಗಿದೆ. ಕೆಲವು ಮಾತ್ರ ಎಲ್ಲರ ಕಣ್ಣಿಗೆ ಕಂಡರೆ, ಅನೇಕ ಫಲಾನುಭವಿಗಳ ಕಥೆ ಎಲೆಮರೆಯಾಗಿಯೇ ಉಳಿಯುತ್ತವೆ. ಇಂತಹ ಫಲಶೃತಿಗಳು ಕಣ್ಣಮುಂದೆ ಬಂದಾಗೆಲ್ಲ, ಸರ್ಕಾರಕ್ಕೆ ಸಾರ್ಥಕತೆಯ ಭಾವ ಮೂಡುತ್ತದೆ. ಇಂತಹ ಯೋಜನೆ ರೂಪಿಸುವಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಶ್ರಮ ಅಪಾರವಾಗಿದೆ ಎಂದರು.

ಮೈಸೂರು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಅರುಣ್ ಕುಮಾರ್ ಮಾತನಾಡಿ, ನಮ್ಮ ತಾಲ್ಲೂಕಿನಲ್ಲಿ ಗ್ಯಾರಂಟಿ ಅನುದಾನ ಬಳಸಿಕೊಂಡ ಕುಟುಂಬದ ಹೆಣ್ಣು ಮಗಳು ಇಂತಹದೊಂದು ಶೈಕ್ಷಣಿಕೆ ಸಾಧನೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರವಾಗಿದೆ. ಆ ಮೂಲಕ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಾರ್ಥಕತೆ ಕಂಡಿವೆ ಎಂದು ಹೇಳಿದರು. ಲೋಕೇಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ಜ್ಞಾನ ಪ್ರಕಾಶ ಸ್ವಾಮೀಜಿ ಅಭಿಮತ

# ಡಾ.ಬಿ.ಆರ್.ಅಂಬೇಡ್ಕರ್ ಸರ್ವ ಜನಾಂಗದ ತೋಟ




ಪಿರಿಯಾಪಟ್ಟಣ: ಅಂಬೇಡ್ಕರ್ ಕೇವಲ ಹೊಲೆಯ, ಮಾದಿಗ ಜನಾಂಗಕ್ಕೆ ಸೀಮಿತರಾದವರಲ್ಲ ಸರ್ವಜನಾಂಗದ ತೋಟ ಎಂದು ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಹೇಳಿದರು.

ಪಟ್ಟಣದ ಕಾಂಗ್ರೆಸ್ ಕಚೇರಿ ಆವರಣದಲ್ಲಿ ತಾಲೋಕು ಬಲಗೈ ಸಮುದಾಯಗಳ ಒಕ್ಕೂಟ ಪಿರಿಯಾಪಟ್ಟಣ ಇವರ ವತಿಯಿಂದ ನೆಡೆದ ಡಾ.ಬಿ.ಆರ್ ಅಂಬೇಡ್ಕರ್ ರವರ 135ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಂಬೇಡ್ಕರ್ ಅಂದರೆ ಭಾರತದ ಅಂತಃಕರಣ. ಇಡೀ ದೇಶದ 147 ಕೋಟಿ ಜನರ ಉಸಿರು. ಅಂಬೇಡ್ಕರ್ ಪುಸ್ತಕದಲ್ಲಿ ರಾರಾಜಿಸಬೇಕು ಹೊರೆತು ಫ್ಲೆಕ್ಸ್ ನಲ್ಲಿ ಅಲ್ಲ, ಅಂಬೇಡ್ಕರ್ ಬರವಣಿಗೆಲ್ಲಿ ಕಾಣಬೇಕೇ ಹೊರೆತು ಮೆರವಣಿಗೆಯಲ್ಲಿ ಅಲ್ಲ ಎಂದರು. ಮುಕ್ಕೋಟಿ ದೇವರು ನೀಡದ ವರವನ್ನು ಅಂಬೇಡ್ಕರ್ ಸಂವಿಧಾನ ವನ್ನು ಈ ದೇಶಕ್ಕೆ ವರವನ್ನಾಗಿ ನೀಡಿದ್ದಾರೆ.

ನಮ್ಮ ಚಿತ್ತವನ್ನು ದೇವಾಲಯಗಳತ್ತ ಕೇಂದ್ರೀಕರಿಸದೆ,ಗ್ರಂಥಾಲಯದತ್ತ ಕಣ್ಣನ್ನು ತೆರಿಯಬೇಕಿದೆ.ಬಾಬಾ ಸಾಹೇಬರು ನಮ್ಮ ದೇಶಕ್ಕೆ ಓಟು,ಸೀಟು,ಹಕ್ಕು ಆರ್ಥಿಕ ನೀತಿಯನ್ನು ಕೊಟ್ಟು ಹೋಗಿದ್ದಾರೆ.ಅಂತಹ ಮಹನೀಯರ ಜಯಂತಿ ಕಾರ್ಯಕ್ರಮಗಳು ಜ್ಞಾನ, ಶೀಲ, ಜಾಗೃತಿಯ ಸಂಕೇತವಾಗಬೇಕಿದೆ.ಇತ್ತೀಚಿಗೆ ಕನಕ, ಕುವೆಂಪು, ಬಸವಣ್ಣರವರು ಕೊಟ್ಟ ವಿಚಾರಗಳಿಗೆ ಬೀಗ ಹಾಕಿ ಅಂತಹ ಮಹನೀಯರ ವ್ಯಕ್ತಿತ್ವಕ್ಕೆ ದಕ್ಕೆ ತರುವ ಕೆಲಸವಾಗುತ್ತಿದೆ.ಅಲ್ಲದೆ ರಸ್ತೆಗಳಲ್ಲಿ ಡಿಜೆ, 3ಡಿ ಹಾಕಿ ಕುಣಿದು ಕುಪ್ಪಳಿಸುವ ಬದಲು ಭಾರತದ ಸಂಸತ್ ಭವನದಲ್ಲಿ ಕುಣಿಯಿರಿ ಆಗ ಮಾತ್ರ "ಪ್ರಜಾಪ್ರಭುತ್ವದ ಕಗ್ಗೊಲೆಗೆ"ನಾಂದಿಯಾಗುತ್ತದೆ ಎಂದರು.

ರೇಷ್ಮೆ ಹಾಗೂ ಪಶುಪಾಲನ ಸಚಿವ ಕೆ ವೆಂಕಟೇಶ್ ಮಾತನಾಡಿ ಕೆಳ ಸಮುದಾಯದಿಂದ ಬಂದ ಅಂಬೇಡ್ಕರ್ ರವರು ಈ ದೇಶದ ಸ್ಥಿತಿಗತಿ ಅರಿತಿದ್ದಲ್ಲದೆ ಯಾವ ಜಾತಿ ಯಾವ ಕಸುಬು ಎಂದು ಅಪಾರ ಅಧ್ಯಯನದ ಜತೆಗೆ ಸಮಾಜದ ಏಳಿಗೆ ಬೆಳವಣಿಗೆಗಾಗಿ ದೂರ ದೃಷ್ಟಿಯಿಟ್ಟು ಸಂವಿಧಾನ ರಚಿಸಿದರು.ಸಂವಿಧಾನ ಇಲ್ಲದೆ ಈ ದೇಶದಲ್ಲಿ ಏನೇನು ಸಾಧ್ಯವಿಲ್ಲ.ದೇಶದ ತಳ ಸಮುದಾಯ ಮಾತ್ರವಲ್ಲದೆ ಎಲ್ಲಾ ಧರ್ಮದ ಜನರಿಗೂ ಉತ್ತಮ ಕೆಲಸದ ಅವಕಾಶದ ಜತೆಗೆ ಶಿಕ್ಷಣಕ್ಕೆ ಒತ್ತು ಕೊಟ್ಟು ಸಮಾಜಕ್ಕೆ ಒಳ್ಳೆಯ ಮಾರ್ಗದರ್ಶನ ತೋರಿದ್ದಾರೆ ಎಂದರು.

ಒಳ ಮೀಸಲಾತಿ ವಿಚಾರದಲ್ಲಿ ಶೇ.5% ತಾತ್ಕಾಲಿಕ ಅನುಕೂಲ ಮಾಡಿಕೊಟ್ಟಿರುವ ಸರ್ಕಾರ ಯಾರು ಯಾವ ಬಿನ್ನಾಭಿಪ್ರಾಯ, ಗೊಂದಲ ಸೃಷ್ಟಿಸದೆ ಸಮಾನತೆ ಕಾಪಾಡಿಕೊಳ್ಳಬೇಕಾಗಿದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಕೆ ಶಿವಕುಮಾರ್,ಬಣ್ಣ ಮತ್ತು ಅರಗು ನಿಗಮದ ಅಧ್ಯಕ್ಷ ಎಚ್ ಡಿ ಗಣೇಶ್, ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಮಾತನಾಡಿದರು. ಪ್ರಸ್ತುತ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿ ಯು ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮತ್ತು ನೆರೆದ ಗಣ್ಯರಿಗೆ ಗೌರವ ಸನ್ಮಾನಿಸಲಾಯಿತು.

ತಾಲೋಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್,ತಹಸೀಲ್ದಾರ್ ನಿಸರ್ಗ ಪ್ರಿಯಾ,ಮಾಜಿ ತಾ.ಪಂ.ಸದಸ್ಯ ಐಲಾಪುರ ರಾಮು, ದಲಿತ ಮುಖಂಡರಾದ ತಮ್ಮಣ್ಣಯ್ಯ, ಪಿ ಮಹದೇವ್, ತಾತನಹಳ್ಳಿ ಈರಯ್ಯ, ಕೋಮಲಾಪುರ ಶಿವರಾಜ್, ಬೆಕ್ಯ ದೇವೇಂದ್ರ, ರಾಂಪುರ ಶಿವಣ್ಣ, ಕೃಷ್ಣಾಪುರ ಗೋಪಾಲ್, ಹುಣಸವಾಡಿ ಜಗದೀಶ್, ಅವರ್ತಿ ಸೋಮಶೇಖರ್,ದೊಡ್ಡ ಹರವೆ ರಾಜಯ್ಯ, ಎಚ್ ಡಿ ರಮೇಶ್, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿದ್ದರು

# ದೂರು ದಾಖಲಿಸಿಕೊಳ್ಳದ ಪೊಲೀಸರು



ಮೈಸೂರು: ಕೌಟುಂಬಿಕ ಆಸ್ತಿಯಾದ ಸೂಯೆಜ್ ಫಾರಂ ಬಳಿ ಇರುವ ಇಡಬ್ಲ್ಯು?ಯಎಸ್ ಮನೆಯಲ್ಲಿ ತಮಗೂ ಭಾಗ ನೀಡಬೇಕೆಂದು ನ್ಯಾಯಾಲಯ ಸೂಚಿಸಿದ್ದರೂ ಸಹಾ ಕೌಟುಂಬಿಕ ಕಲಹದ ಕಾರಣ ತಮ್ಮ ಪತಿಯ ಅಣ್ಣ ಹಾಗೂ ಅತ್ತಿಗೆ ಐದು ದಿನಗಳ ಹಿಂದೆ ಮನೆಯಿಂದ ತಮ್ಮನ್ನು ಹೊರ ಹಾಕಿದ ಕಾರಣ ಮಕ್ಕಳೊಡನೆ ಬೀದಿಯಲ್ಲೇ ವಾಸವಾಗಿದ್ದೇವೆ. ಈ ಬಗ್ಗೆ ದೂರು ನೀಡಲು ಹೋದರೆ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಸ್ವೀಕರಿಸುತ್ತಿಲ್ಲ ಎಂದು ಬಿ.ಆರ್. ಚಂದ್ರಕಲಾ ಅಳಲು ತೋಡಿಕೊಂಡರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತಮ್ಮ ಪತಿ ರಮೇಶ್ ಅವರಿಂದ ಭಾಗದ ವೇಳೆ ವಂಚಿಸಿ ಪತ್ರಕ್ಕೆ ಸಹಿ ಹಾಕಿಸಿಕೊಳ್ಳಲಾಗಿದೆ. ಇದರ ಅರಿವಾಗಿ ನ್ಯಾಯಾಲಯದ ಮೊರೆ ಹೋದ ಬಳಿಕ ಭಾಗ ಮಾಡಿಕೊಂಡು ಬನ್ನಿ ಎಂದು ನ್ಯಾಯಾಲಯ ಸೂಚಿಸಿದೆ. ಆದರೆ ಕಳೆದ ಐದು ದಿನಗಳ ಹಿಂದೆ ಕೌಟುಂಬಿಕ ಕಲಹ ಕಾರಣ ತಾವು ವಾಸವಿದ್ದ ಮನೆಯಿಂದ ತಮ್ಮನ್ನು ಹೊರ ದೂಡಲಾಗಿದೆ. ಇದರಿಂದಾಗಿ ಕಳೆದ ಐದು ದಿನಗಳಿಂದಲೂ ಕುಟುಂಬ ಬೀದಿಯಲ್ಲೇ ವಾಸಿಸಬೇಕಾಗಿ ಬಂದಿದೆ. ತಮ್ಮ ರಕ್ಷಣೆಗೆ ಬರಬೇಕೆಂದು ಕೋರಿ ದೂರು ನೀಡಲು ಹೋದರೆ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಸ್ವೀಕರಿಸುತ್ತಿಲ್ಲ. ತಮ್ಮ ಇಬ್ಬರು ಹೆಣ್ಣು ಮಕ್ಕಳು ಪದವಿ ಪೂರ್ವ ವ್ಯಾಸಂಗ ಮಾಡುತ್ತಿದ್ದು, ಈಗ ಬೀದಿಯಲ್ಲೇ ವಾಸಿಸುವಂತಾಗಿದೆ. ಹೀಗಾಗಿ ಸಂಬಂಧಿಸಿದವರು ಮಧ್ಯ ಪ್ರವೇಶಿಸಿ ಮನೆಗೆ ಸೇರಿಸಬೇಕು. ನ್ಯಾಯಾಲಯದ ಆದೇಶ ಪಾಲನೆಗೆ ಸೂಚಿಸಬೇಕೆಂದು ಮನವಿ ಮಾಡಿದರು. ಪತಿ ರಮೇಶ್ ಹಾಗೂ ಇಬ್ಬರ ಪುತ್ರಿಯರು ಇದ್ದರು.

# ಅಂಬೇಡ್ಕರ್ ನೀಡಿದ ಸಂವಿಧಾನ ರೈತರ ಪ್ರಗತಿಗೆ ನಾಂದಿ



ಚಾಮರಾಜನಗರ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನವು ರೈತ ಪರವಾಗಿದ್ದು, ಸಮಸ್ತ ರೈತಕುಲ ನೆಮ್ಮದಿಯಿಂದ ದೇಶಕ್ಕೆ ಅನ್ನ ನೀಡುವಂತಾಗಲು ಅವರ ದೂರ ದೃಷ್ಟಿಯೇ ಕಾರಣ ಎಂದು ಚಂದಕವಾಡಿ ಹೋಬಳಿ ಪರಿಶಿಷ್ಟ ಜಾತಿ ರೈತ ಸಂಘದ ಅಧ್ಯಕ್ಷ ದಡದಹಳ್ಳಿ ಗೋವಿಂದರಾಜು ತಿಳಿಸಿದರು.

ತಾಲೂಕಿನ ಚಂದಕವಾಡಿ ಅಂಬೇಡ್ಕರ್ ಭವನದಲ್ಲಿ ಹೋಬಳಿ ಮಟ್ಟದ ಪರಿಶಿಷ್ಟ ಜಾತಿ ರೈತ ಸಂಘದ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಅಂಬೇಡ್ಕರ್ ಅವರು ಕೇವಲ ಶೋಷಿತ ವರ್ಗಕ್ಕಷ್ಟೇ ಅಲ್ಲದೆ, ರೈತರ ಅಭಿವೃದ್ಧಿಯನ್ನೂ ಗಮನದಲ್ಲಿಟ್ಟುಕೊಂಡು ಆಹಾರ ಭದ್ರತೆ, ಉಳುವವನೇ ಭೂಮಿಯ ಒಡೆಯ, ಗುಂಪು ಕೃಷಿಯಂತಹ ಕ್ರಾಂತಿಕಾರಕ ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದರು. ಅವರ ಆಶಯದಂತೆ ನಂತರದ ಸರ್ಕಾರಗಳು ರೈತರಿಗೆ ವಿವಿಧ ಸವಲತ್ತುಗಳನ್ನು ನೀಡಲು ಸಾಧ್ಯವಾಯಿತು ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಸಚಿವ ಬಿ. ರಾಚಯ್ಯ ಅವರ ಸೇವೆಯನ್ನು ಸ್ಮರಿಸಿದ ಅವರು, ಅಂಬೇಡ್ಕರ್ ಅವರ ತತ್ವದಂತೆ ನಡೆದ ರಾಚಯ್ಯ ಅವರು ಈ ಭಾಗದ ಬಡವರಿಗೆ ಸಾಗುವಳಿ ಭೂಮಿ ನೀಡಿದ್ದಲ್ಲದೆ, ಚಿಕ್ಕಹೊಳೆ ಹಾಗೂ ಸುವರ್ಣವತಿ ಜಲಾಶಯಗಳನ್ನು ನಿರ್ಮಿಸುವ ಮೂಲಕ ರೈತರ ಬಾಳಿಗೆ ಬೆಳಕಾದರು ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಗುಂಡಣ್ಣ ಮಾತನಾಡಿ, ಅಂಬೇಡ್ಕರ್ ಅವರ 'ಶಿಕ್ಷಣ, ಸಂಘಟನೆ ಮತ್ತು ಹೋರಾಟ'ದ ಮಂತ್ರದಂತೆ ರೈತರು ಮುನ್ನಡೆಯಬೇಕು. ಸಾಗುವಳಿ ಚೀಟಿ ಹೊಂದಿರುವ ರೈತರಿಗೆ ಪೂರ್ಣಪ್ರಮಾಣದ ಹಕ್ಕು ನೀಡಿ, ಆರ್.ಟಿ.ಸಿ ದಾಖಲೆಗಳಲ್ಲಿ ಹೆಸರು ಬರುವಂತೆ ಮಾಡಲು ಕಂದಾಯ ಇಲಾಖೆ ಕ್ರಮವಹಿಸಬೇಕು. ಈ ಹಕ್ಕಿಗಾಗಿ ಸಂಘದ ಹೋರಾಟ ನಿರಂತರವಾಗಿರುತ್ತದೆ ಎಂದರು. ಕಾರ್ಯಕ್ರಮದಲ್ಲಿ ಸಂಘದ ಗೌರವ ಅಧ್ಯಕ್ಷ ಸಿದ್ದಯ್ಯನಪುರ ಸೋಮಣ್ಣ, ಉಪಾಧ್ಯಕ್ಷ ಚಂದಕವಾಡಿ ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ದಡದಹಳ್ಳಿ ಮೂರ್ತಿ, ನಿರ್ದೇಶಕರಾದ ಲಿಂಗರಾಜು, ಆಲೂರು ಮಲ್ಲಣ್ಣ, ಕುಂಬೇಶ್ವರ ಸ್ವಾಮಿ, ಅರಳಿಪುರ ಚಂದ್ರಶೇಖರ್ ಸೇರಿದಂತೆ 28 ಗ್ರಾಮಗಳ ರೈತ ಸಂಘದ ಸದಸ್ಯರು ಉಪಸ್ಥಿತರಿದ್ದರು.

## ಮೇ2ರಂದು ನೆರವಿಗಾಗಿ ಸಂಗೀತ ಕಾರ್ಯಕ್ರಮ

ಮೈಸೂರು: ಸ್ವಾಮಿ ವಿವೇಕಾನಂದ ಯೂತ್ ಮೂವ್ಮೆಂಟ್ ವತಿಯಿಂದ ಉಪಶಮನ ಆರೈಕೆಯ ನೆರವಿಗಾಗಿ ಮೇ 2 ರಂದು ಸಂಜೆ 5 ರಿಂದ ರಾತ್ರಿ 9 ರವರೆಗೆ ನಗರದ ಕೆಎಸ್ಒಯು ಘಟಿಕೋತ್ಸವ ಭವನದಲ್ಲಿ ಸ್ವರಾನುಭೂತಿ ಎಂಬ ದೇಣಿಗೆ ಸಂಗ್ರಹದ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿವೇಕಾನಂದ ಯೂತ್ ಮೂಮೆಂಟ್‌ನ ಸಿಇಓ ಸವಿತಾ ಸುಳುಗೋಡು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಗೋಲ್ಡ್– 3 ಸಾವಿರ, ಸಿಲ್ವರ್– 5 ಸಾವಿರ, ಕಂಚು– 1299 ಹಾಗೂ ವಿದ್ಯಾರ್ಥಿ ಎಂಬ 499 ರೂ. ಟಿಕೆಟ್‌ಗಳಿವೆ. ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 96866 66155 ನ್ನು ಸಂಪರ್ಕಿಸಬಹುದಾಗಿದೆ. ಖ್ಯಾತ ಗಾಯಕರಾದ ವಿಜಯ್ ಪ್ರಕಾಶ್ ಹಾಗೂ ಅನುರಾಧ ಭಟ್ ಮೊದಲಾದವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಈ ವೇಳೆ ಸಂಗ್ರಹವಾದ ಹಣವನ್ನು ಗಂಭೀರ ಅನಾರೋಗ್ಯಕ್ಕೆ ಒಳಗಾಗಿದ್ದು, ಚಿಕಿತ್ಸೆ ಪಡೆಯುತ್ತಿರುವವರಲ್ಲಿ ಉಪಶಮನ ಆರೈಕೆ ಅಗತ್ಯವಿರುವವರಿಗೆ ನೆರವು ನೀಡಲು ಬಳಸಲಾಗುವುದು ಎಂದು ತಿಳಿಸದಿರು.

ಏಡ್ಸ್, ಇನ್ನಿತರ ಗಂಭೀರ ಸಮಸ್ಯೆಗಳಿಂದ ಬಳಲುತ್ತ, ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆಯಲಾಗದೇ ಇರುವವರ ಸಂಖ್ಯೆ ಕಡಿಮೆಯೇನಲ್ಲ. ಇಂತಹವರ ನೆರವಿಗೆ ಈ ಉಪಶಮನ ಆರೈಕೆ ಕೇಂದ್ರ ಧಾವಿಸಿ, ಸಾವಿನ ದಿನಗಳನ್ನು ನೆಮ್ಮದಿ, ಘನತೆಯುತವಾಗಿ ಕಳೆಯುವ ಅವಕಾಶ ಕಲ್ಪಿಸುತ್ತಿದೆ. ಸಂಸ್ಥೆಯ ವಾಹನದಲ್ಲಿ ಓರ್ವ ವೈದ್ಯರು, ಓರ್ವ ಸಮಾಲೋಚಕ, ಓರ್ವ ನರ್ಸ್ ಇದ್ದು, ಕೆಲವಾರು ರೀತಿಯ ಗಾಯಗಳಿಗೆ ತಾವೇ ಡ್ರೆಸ್ಸಿಂಗ್ ಮಾಡಿಕೊಳ್ಳುವುದನ್ನು, ಅಂತಹ ಅನಾರೋಗ್ಯ ಪೀಡಿತರನ್ನು ಹೇಗೆ ನೋಡಿಕೊಳ್ಳಬಹುದೆಂಬ ತರಬೇತಿ ಸಹಾ ನೀಡುತ್ತಿದ್ದಾರೆ ಎಂದರು. ಡಾ.ವಿಭಾ, ರಾಮಕೃಷ್ಣ ಮುದ್ರೆ ಇದ್ದರು.



# ಬೆಂಕಿ ಅವಘಡಗಳ ಜಾಗೃತಿ

## ರಾಮನಗರದಲ್ಲಿ ಅಗ್ನಿ ಶಾಮಕ ದಳದವರಿಂದ ಆಯೋಜನೆ



ರಾಮನಗರ: ಆಕಸ್ಮಿಕ ಬೆಂಕಿ ಅವಘಡಕ್ಕೆ ಅವಕಾಶವಾಗದಂತೆ ಕಟ್ಟಡ ಮಾಲೀಕರು, ನಾಗರೀಕರು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿರಬೇಕು. ಆಗ ಸಾವು–ನೋವು, ನಷ್ಟವನ್ನು ನಿಯಂತ್ರಿಸಬಹುದು ಎಂದು ರಾಮನಗರ ಅಗ್ನಿಶಾಮಕ ಠಾಣಾಧಿಕಾರಿ ಪ್ರೇಮಾನಂದ್ ಹೇಳಿದರು.


ಇಲ್ಲಿನ ಶ್ರೀ ಕನ್ನಿಕಾಮಹಲ್‌ನಲ್ಲಿ ವಾಸವಿ ಕ್ಲಬ್ ರಾಮನಗರ ಆಯೋಜಿಸಿದ್ದ ಅಗ್ನಿ ಆಕಸ್ಮಿಕ ಸಂದರ್ಭಗಳಲ್ಲಿ ನಾಗರೀಕರು ವಹಿಸಬೇಕಾದ ಪಾತ್ರಗಳು, ಮುಂಜಾಗ್ರತಾ ಕ್ರಮಗಳ ಬಗ್ಗೆ ಅವರು ಅರಿವು ಮೂಡಿಸಿದರು. ಅಗ್ನಿ ಆಕಸ್ಮಿಕ ಸಂದರ್ಭಗಳಲ್ಲಿ ಕಟ್ಟಡದ ನೆರೆಹೊರೆಯವರು, ನಾಗರೀಕರು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಅವರು ಮಾಹಿತಿ ಕೊಟ್ಟರು.

ಇದೇ ವೇಳೆ ಅಗ್ನಿ ಶಾಮಕ ದಳದ ಪ್ರಮುಖ ಅಗ್ನಿಶಾಮಕ ಮುತ್ತಣ್ಣ, ಅಗ್ನಿಶಾಮಕರುಗಳಾದ ರಮೇಶ್ ಎಂ.ಎಂ. ಮತ್ತು ಮಹೇಶ್ ಪೂಜಾರಿ ಅವರು ಅಗ್ನಿ ನಂದಿಸುವ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಿದರು. ಫೈರ್ ಎಕ್ಸಟಿಂಗ್ವಿಷರ್ ಮೂಲಕ ನಾಗರೀಕರೇ ಸ್ವತಃ ಬೆಂಕಿ ನಂದಿಸುವುದು ಹೇಗೆ ಎಂದು ತೋರಿಸಿಕೊಟ್ಟರು. ಇದೇ ಪೆಟ್ರೋಲ್, ಡೀಸಲ್ ಮುಂತಾದ ಘಟಕಗಳಿಗೆ ಅಗ್ನಿ ಅವಘಡ ಸಂಭವಿಸಿದರೆ ಫೋಮ್ ಮತ್ತು ನೀರು ಬಳಸಿ ಅಗ್ನಿಯನ್ನು ನಿಯಂತ್ರಿಸುವ ಬಗೆಯನ್ನು ವಿವರಿಸಿದರು. ನೀರು ಹರಿಸುವ ಪೈಪ್ ಮತ್ತು ಹೋಸ್ ಪೈಪ್‌ನ ವಿವಿಧ ಕೆಲಸಗಳನ್ನು ನಾಗರೀಕರಿಗೆ ತೋರಿಸಿಕೊಟ್ಟರು. ಕೆಲವು ನಾಗರೀಕರು ವ್ಯಕ್ತಪಡಿಸಿದ ಅನುಮಾನಗಳಿಗೆ ಅವರು ಪರಿಹಾರವನ್ನು ಕೊಟ್ಟರು.

ಅಗ್ನಿ ಆಕಸ್ಮಿಕ ಸಂದರ್ಭಗಳಲ್ಲಿ ನಾಗರೀಕರು ಧೈರ್ಯಗುಂದದೆ, ಮೊದಲು ಅಗ್ನಿಶಾಮಕ ದಳ, ಪೊಲೀಸರಿಗೆ ಮಾಹಿತಿ ಕೊಡಬೇಕು. ಬಹುತೇಕ ಎಲ್ಲ ನಾಗರೀಕರು ಪ್ರಥಮ ಚಿಕಿತ್ಸೆಯ ತರಬೇತಿ ಪಡೆದಿದ್ದರು ದುರಂತಗಳು ಸಂಭವಿಸಿದಾಗ ನೆರವಿಗೆ ಬರುತ್ತದೆ ಎಂಬುದರ ಬಗ್ಗೆಯೂ ನಾಗರೀಕರು ಅರಿವು ಮೂಡಿಸಿಕೊಂಡರು.

ಪ್ರಾತ್ಯಕ್ಷಿಕೆ ಮತ್ತು ಅರಿವು ಮೂಡಿಸಿದ ಅಗ್ನಿ ಶಾಮಕ ದಳದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಾಸವಿ ಕ್ಲಬ್ ರಾಮನಗರದ ಅಧ್ಯಕ್ಷ ಕೆ.ಎನ್. ಗಿರೀಶ್, ಕಾರ್ಯದರ್ಶಿ ಹರ್ಷಿತಾ, ಖಜಾಂಚಿ ಅನುರಾದ ಮುಂತಾದವರು ಕೃತಜ್ಞತೆ ಅರ್ಪಿಸಿದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ !

ಬಂದೇ ಏನೋ ರಂಗಯ್ಯ,
ಮುದದಿಂದಲಿ ಎನ್ನ ಸದನದೊಳಗೆ ನೀನು,
ಬಂದೇ ಏನೋ ರಂಗಯ್ಯ!

ರಂಗು ರಂಗೀನ ರಂಗೋಲೆಯ ಬಿಡಿಸಿ,
ಚಪ್ಪರ ಹಾಕಿಸಿ, ಪದುಮವ ಜೋಡಿಸಿ,
ಒಪ್ಪುವ ಒಬ್ಬಟ್ಟು , ತುಪ್ಪವು ಕಾಯಿಸಿ,
ಅಮೃತದಂಥಾ ಸೀಕರಣೆ ಮಾಡಿಸಿ!

ಮುತ್ತಿನ ಮಣಿ ತಂದು ಭಕ್ತಿಯಲಿಟ್ಟೆ ,
ತುಪ್ಪದ ದೀಪವ ಸಾಲಾಗಿ ಇಟ್ಟೆ ,
ಹೊತ್ತಿಗೆ ಸರಿಯಾಗಿ ಬಂದು ಬಿಡು ನೀನು,
ಕಾಯಿಸಿದಿರು ಎನ್ನ ರಂಗಯ್ಯನೇ ನೀನು!

ಗಂಧವ ತೀಡಿದೆ, ಅಕ್ಷತೆ ಮಾಡಿದೆ,
ನೊಸಲಿಗೆ ತಿಲಕವ ನೀನಗಿಟ್ಟೆ ,
ರೇಷ್ಮೆಯ ಶಲ್ಯವ ನಿನಗಾಗಿ ತೆಗೆದಿಟ್ಟೆ ,
ಹೇಮಗಿರೀಶನೇ ತವಕದಿ ನಯನವ ನೆಟ್ಟೆ!

# ನಿಯಮ ಪಾಲಿಸಿ; ವಾಹನ ಓಡಿಸಿ– ಡಿಸಿಪಿ ಸುಂದರರಾಜ್ ಸಲಹೆ



ಮೈಸೂರು: ನಿಯಮ ಪಾಲಿಸದೆ ವಾಹನ ಓಡಿಸಬೇಡಿ ಎಂದು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್. ಸುಂದರರಾಜ್ ಸಲಹೆ ನೀಡಿದರು.

ಕಡಕೊಳದ ಸಿರೇನ್ ಕಂಪೆನಿಯು ರಸ್ತೆ ಸುರಕ್ಷತಾ ಅಭಿಯಾನದ ಅಂಗವಾಗಿ ನಗರದ ಯುವರಾಜ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಹೆಲ್ಮೆಟ್ ವಿತರಿಸಿ ಅವರು ಮಾತನಾಡಿದರು. ದೇಶದಲ್ಲಿ ಪ್ರತಿವರ್ಷ 1.53 ಲಕ್ಷ ಜನರು ಅಪಘಾತಗಳಲ್ಲಿ ಸಾವನ್ನಪ್ಪುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ರತಿವರ್ಷ ನಡೆಯುವ 40 ಸಾವಿರ ಅಪಘಾತಗಳಲ್ಲಿ ಹತ್ತು ಸಾವಿರ ಜನರು ಮೃತಪಡುತ್ತಿದ್ದಾರೆ. ನಗರದಲ್ಲಿ 600 ಜನರು ಅಪಘಾತಗಳಲ್ಲಿ

ಪ್ರತಿವರ್ಷ ಸಾವನ್ನಪ್ಪುತ್ತಾರೆ. ಇದರಲ್ಲಿ ಶೇ. 2ರಷ್ಟು ಹೆಲ್ಮೆಟ್ ಧರಿಸದೆ ಇರುವವರು ಇರುತ್ತಾರೆ. ಇದಕ್ಕಾಗಿ ಹೆಲ್ಮೆಟ್ ಧರಿಸದೆ ಇರುವುದೇ ಕಾನೂನು ಎಂದು ತಿಳಿಯದೆ, ಪೊಲೀಸರನ್ನುಓ ನೋಡಿ ಹೆಲ್ಮೆಟ್ ಧರಿಸದೆ, ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನಗಳನ್ನು ಓಡಿಸಿ ಎಂದು ಕಿವಿಮಾತು ಹೇಳಿದರು. ತರಕಾರಿ, ಹಾಲು ತರಲು ಹೋಗುವಾಗ ಹೆಲ್ಮೆಟ್ ಧರಿಸದೆ ಹೋಗಬೇಡಿ. ಅಪಘಾತವಾಗಿ ತಲೆಗೆ ಪೆಟ್ಟಾಗಿ ಉಳಿದರೆ ಕುಟುಂಬದವರಿಗೆ ಹೊರೆ ಎಂದು ಎಚ್ಚರಿಸಿದರು.

ಚಾಲನಾ ಪರವಾನಗಿ ಇಲ್ಲದೆ ಇರಬೇಡಿ. ಕಡ್ಡಾಯವಾಗಿ ಜೀವ ವಿಮೆ ಪಡೆಯಿರಿ. ನಿಮ್ಮ ಹೆತ್ತವರು ನಿಮಗೆ ಜೀವ ಕೊಡುತ್ತಾರೆ. ಆದರೆ ಜೀವನ ರೂಪಿಸಿಕೊಳ್ಳುವುದು ನಿಮ್ಮ ಕೈಯಲ್ಲಿದೆ. ಅಮೂಲ್ಯವಾದ ಬದುಕಿಗೆ ಹೆಲ್ಮೆಟ್ ಧರಿಸಿರಿ ಎಂದರು. ಮುಖ್ಯ ಅತಿಥಿಗಳಾಗಿ ಸಿರೇನ್ ಕಂಪೆನಿಯ ನಿರ್ದೇಶಕರಾದ ಟಕಾಕೊ ಯನಾಸೆ, ಕೋರ್ಘೋ ಅಸಕುರ ಭಾಗವಹಿಸಿದ್ದರು. ಯುವ ರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್.ಮಹದೇವಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಕನ್ನಡಇದು ವಿಭಾಗದ ಮುಖ್ಯಸ್ಥರಾದ ಪ್ರೊ.ಸಿ.ಡಿ.ಪರಶುರಾಮ್ ಸ್ವಾಗತಿಸಿದರು. ಸಿರೇನ್ ಕಂಪೆನಿಯ ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕ ಎನ್.ಪದ್ಮನಾಭ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಕಾಲೇಜಿನ ವಿದ್ಯಾರ್ಥಿಗಳಿಗೆ 200 ಹೆಲ್ಮೆಟ್ ವಿತರಿಸಲಾಯಿತು.

# ನಗರೋತ್ಥಾನ ಕಾಮಗಾರಿಗಳ ಪರಿಶೀಲನೆ




ಚಾಮರಾಜನಗರ, ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ನಗರೋತ್ಥಾನ 4ನೇ ಹಂತದ ಯೋಜನೆಯಡಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿ ಶ್ರೀರೂಪ ಅವರು ಸೋಮವಾರ (ಏ.27) ಪರಿಶೀಲಿಸಿದರು.

ನಗರದ ವಾರ್ಡ್ ಸಂಖ್ಯೆ 19, 20 ಹಾಗೂ 29ರಲ್ಲಿ ಸುಮಾರು 118 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 1.18 ಕಿ.ಮೀ ಉದ್ದದ ಸಿಸಿ ರಸ್ತೆ ಕಾಮಗಾರಿಯನ್ನು ವೀಕ್ಷಿಸಿದರು. 292 ಮೀಟರ್ ಉದ್ದದ ಚರಂಡಿ ಅಭಿವೃದ್ಧಿ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಇಲಾಖೆಯ ಯೋಜನಾ ನಿರ್ದೇಶಕರಾದ ವೆಂಕಟೇಶ್, ಕಾರ್ಯಪಾಲಕ ಅಭಿಯಂತರರಾದ ರಾಮಚಂದ್ರ, ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಪ್ರಕಾಶ್, ಇತರೆ ಅಧಿಕಾರಿಗಳು ಇದ್ದರು.

# ದೇವಸ್ಥಾನ ನಿರ್ಮಾಣಕ್ಕೆ ಭೂಮಿಪೂಜೆ



ಸರಗೂರು: ತಾಲೂಕಿನ ಕುರ್ಣೇಗಾಲ ಗ್ರಾಮದಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಪಡವಲು ಮಠ ಶ್ರೀವಿರಕ್ತ ಮಠದ ಸ್ವಾಮೀಜಿ ಶ್ರೀ ಮಹದೇವಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಭೂಮಿ ಪೂಜೆ ಮಾಡಿ, ಯಾವುದೇ ವಿಘ್ನಗಳಿಲ್ಲದೆ ದೇವಸ್ಥಾನ ಪೂರ್ಣಗೊಳಿಸುವಂತೆ ಭಗವಂತನಲ್ಲಿ ಸಂಕಲ್ಪ ಮಾಡಲಾಯಿತು. ದೇವಸ್ಥಾನ ನಿರ್ಮಾಣ ಭೂಮಿ ನೀಡಿದ ದಾನಿಗಳಾದ ಮರಿಸ್ವಾಮಿ ಹಾಗೂ ಸರೋಜಮ್ಮ ಅವರನ್ನು ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ಗೌಡಿಕೆ ಬಸವಣ್ಣ ಸೇರಿದಂತೆ ಕುರ್ಣೇಗಾಲ ಗ್ರಾಮಸ್ಥರು ಇದ್ದರು.

## ಬೈಕ್– ಈಚರ್ ವಾಹನದ ನಡುವೆ ಅಪಘಾತ: ಬೈಕ್ ಸವಾರ ಸಾವು

ಗುಂಡ್ಲುಪೇಟೆ: ಗುಂಡ್ಲುಪೇಟೆ ಹಾಗೂ ಚಾಮರಾಜನಗರ ಮುಖ್ಯರಸ್ತೆಯಲ್ಲಿರುವ ತಾಲೂಕಿನ ತೆರಕಣಾಂಬಿ ಗ್ರಾಮದ ಎಸ್‌ಬಿಐ ಬ್ಯಾಂಕ್ ಬಳಿ ಈಚರ್ ವಾಹನ ಹಾಗೂ ಬೈಕ್ ನಡುವೆ ಅಪಘಾತ



ಸಂಭವಿಸಿ ಬೈಕ್ ಸವಾರ ಮೃತಪಟ್ಟಿದ್ದಾನೆ.

ತಾಲೂಕಿನ ಬಲಚವಾಡಿ ಗ್ರಾಮದ ಗುರುಪ್ರಸಾದ್(30) ಮೃತಪಟ್ಟ ವ್ಯಕ್ತಿ. ಈತ ಗುಂಡ್ಲುಪೇಟೆ ಕಡೆಯಿಂದ ತೆರಕಣಾಂಬಿ ಗ್ರಾಮಕ್ಕೆ ಮಂಗಳವಾರ ರಾತ್ರಿ ಬೈಕ್ ನಲ್ಲಿ ಬರುತ್ತಿದ್ದಾಗ ಚಾಮರಾಜನಗರ ಕಡೆಯಿಂದ ಗುಂಡ್ಲುಪೇಟೆಗೆ ಹೋಗುತ್ತಿದ್ದ ಕೇರಳ ಮೂಲದ ಈಚರ್ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದಾನೆ. ಕೂಡಲೇ ಗಾಯಾಳುವನ್ನು ಗುಂಡ್ಲುಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಆಸ್ಪತ್ರೆಗೆ ರವಾನಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಆಗಮಿಸಿದ ತೆರಕಣಾಂಬಿ ಠಾಣೆ ಪೊಲೀಸರು ವಾಹನಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ನಗರಸಭೆ ವಿರುದ್ಧ ನಿವಾಸಿಗಳ ಆಕ್ರೋಶ

# ಡಿಸಿ, ಎಸ್ಪಿಗಳಿರುವ ಬಡಾವಣೆಯಲ್ಲೇ ಜಲಕ್ಷಾಮ

ಚಾಮರಾಜನಗರ, ನಗರದ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ತಹಶೀಲ್ದಾರ್ ಸೇರಿ ಉನ್ನತ ಅಧಿಕಾರಿಗಳಿರುವ ಪಿಡಬ್ಲ್ಯೂಡಿ ಕಾಲೋನಿ, ಹೌಸಿಂಗ್ ಬೋರ್ಡ್ ಬಡಾವಣೆಗಳಲ್ಲೇ ಜಲಕ್ಷಾಮ ಎದುರಾಗಿದ್ದು, ಕಳೆದ 15 ದಿನಗಳಿಂದ ನೀರು ಪೂರೈಕೆಯಾಗದೇ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಗ್ರಾಮಾಂತರ ಪ್ರದೇಶಕ್ಕಿಂತ ಜಿಲ್ಲಾ ಕೇಂದ್ರದಲ್ಲೇ ನೀರಿಗೆ ತತ್ವಾರ ಉಂಟಾಗಿದೆ. ಹೀಗಾಗಿ ಬುಧವಾರ ನಗರದ ಪಿ.ಡಬ್ಲ್ಯು ಡಿ, ಹೌಸಿಂಗ್ ಬೋರ್ಡ್ ನ ನೂರಾರು ಮಂದಿ ಜಿಲ್ಲಾಧಿಕಾರಿ ಶ್ರೀರೂಪ ಅವರನ್ನು ಭೇಟಿ ಮಾಡಿ ನೀರು ಪೂರೈಕೆ ಮಾಡುವಂತೆ ಮನವಿ ಮಾಡಿಕೊಂಡಿದ್ದಾರೆ. ಜೊತೆಗೆ, ಚಾಮರಾಜನಗರ ನಗರಸಭೆ ಅಧಿಕಾರಿಗಳ ನಿರ್ಲಕ್ಷ್ಯತೆ ವಿರುದ್ಧವೂ ಕಿಡಿಕಾರಿದ್ದಾರೆ.

15 ದಿನಕ್ಕೊಮ್ಮೆ ಅರ್ಧ ತಾಸು ನೀರನ್ನೂ ಕೂಡ ಪೂರೈಕೆ ಮಾಡುತ್ತಿಲ್ಲ. ಬಡಾವಣೆಯಲ್ಲಿ ಬಹುಪಾಲು ಮಂದಿ ನೌಕರರೇ ಇದ್ದು, ನಿತ್ಯ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.



ನಿವಾಸಿಗಳ ಜೊತೆಗೆ ಡಿಸಿ ಅವರು ನಡೆಸಿದ ಸಭೆಯಲ್ಲಿ ನಗರಸಭೆ ಅಧಿಕಾರಿಗಳು ಸುಳ್ಳು ಮಾಹಿತಿ ನೀಡಿದ್ದರಿಂದಾಗಿ ನಿವಾಸಿಗಳು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವಾರ್ಡ್ ನಂ 26ಕ್ಕೆ 2 ದಿನಕ್ಕೊಮ್ಮೆ ನೀರು ಬಿಡುತ್ತಿರುವುದಾಗಿ ನಗರಸಭೆ ಆಯುಕ್ತ ಹಾಗೂ ಇಂಜಿನಿಯರ್?ಗಳು ಮಾಹಿತಿ ನೀಡಿದ್ದಕ್ಕೆ, ಕಳೆದ 15 ದಿನಗಳಿಂದ ಕುಡಿಯುವ ನೀರಿನ ಪೂರೈಕೆ ಮಾಡಿಲ್ಲ ಎಂದು ನಿವಾಸಿಗಳು ಹೇಳುತ್ತಿದ್ದಾರೆ ಎಂದು ನಗರಸಭೆ ಅಧಿಕಾರಿಗಳ ಮೇಲೆ ಜಿಲ್ಲಾಧಿಕಾರಿ ಶ್ರೀರೂಪ ಕೆಂಡಾಮಂಡಲರಾದರು.

## ಡಿಸಿ ಶ್ರೀರೂಪ ಅವರ ಮನೆಗೂ ನೀರಿಲ್ಲ

ತನ್ನ ಮನೆಯೂ ಇದೇ ವಾರ್ಡ್?ಗೆ ಬರಲಿದೆ. ನೀರಿನ ಸಮಸ್ಯೆ ಆಗಿರುವುದು ನಿಜ ಎಂದು ಡಿಸಿ ಮಾಧ್ಯಮದವರೊಂದಿಗೆ ಮಾತನಾಡುವಾಗ ತಿಳಿಸಿದರು. ಈಗಾಗಲೇ ಇಂಜಿನಿಯರ್??ಗಳಿಗೆ ನಿರ್ದೇಶನ ನೀಡಿದ್ದು, ರೀ ಬೋರಿಂಗ್, ಟ್ಯಾಂಕರ್ ಮೂಲಕ ನೀರು ಪೂರೈಸುವಂತೆ ಹೇಳಿದ್ದೇನೆ. ಮೇ 15ರೊಳಗೆ ಅಮೃತ್ ಯೋಜನೆ ಸಮಸ್ಯೆ ಬಗೆಹರಿಯಲಿದೆ. ಹೊಸ ಯೋಜನೆ ಪ್ರಗತಿಯ ಜೊತೆಗೆ ಹಳೇ ಸಂಪರ್ಕದಲ್ಲಿ ನೀರು ಪೂರೈಸುವಂತೆ ಸೂಚಿಸಿದ್ದೇನೆ. ತ್ವರಿತ ಸಮಸ್ಯೆ ಪರಿಹಾರಕ್ಕೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುವುದು ಎಂದು ಭರವಸೆ ನೀಡಿದರು.

# ನೀರಿನ ಸಮಸ್ಯೆ ತುರ್ತಾಗಿ ಕೊಳವೆಬಾವಿ ಕೊರೆಸಿ



ಚಾಮರಾಜನಗರ. ನಗರಸಭೆ ವ್ಯಾಪ್ತಿಯ ರಾಮಸಮುದ್ರ ದೊಡ್ಡಬೀದಿ, ಚಿಕ್ಕಬೀದಿ, ಕುರುಬರ ಬೀದಿ, ಹೌಸಿಂಗ್ ಬೋರ್ಡ್ ಕಾಲೋನಿ, ಗಾಳೀಪುರ 2ನೇ ವಾರ್ಡ್, 3ನೇವಾರ್ಡ್ ಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿನೀಡಿ ಕುಡಿಯುವನೀರು, ರಸ್ತೆ, ಚರಂಡಿಸಮಸ್ಯೆ ಕುರಿತಂತೆ ವಾರ್ಡ್ ನಿವಾಸಿಗಳಿಂದ ಅಹವಾಲು ಸ್ವೀಕರಿಸಿದರು.

ಇದೇವೇಳೆ ಅವರು ಮಾತನಾಡಿ, ಬೇಸಿಗೆ ಆರಂಭವಾಗಿದ್ದು, ಅಂತರ್ಜಲ ಕುಸಿತದ ಹಿನ್ನೆಲೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಜನಸಾಮಾನ್ಯರಿಗೆ ತೊಂದರೆಯಾಗಿದೆ. ಅಂತರ್ಜಲ ಪರೀಕ್ಷಕರನ್ನು ಕರೆಸಿ, ಪಾಯಿಂಟ್ ಮಾಡಿಸಬೇಕು, ನೀರುಸಿಗುವ ಕಡೆ ತುರ್ತಾಗಿ ಕೊಳವೆಬಾವಿ ಕೊರೆಸಿ, ಪೈಪ್‌ಲೈನ್ ಕಾಮಗಾರಿ ಕೈಗೊಂಡು, ಜನರಿಗೆ ನೀರು ಕೊಡಬೇಕು, ಇದರ ಜೊತೆಗೆ ಹಳೇ ಕೊಳವೆ ಬಾವಿಗಳನ್ನು ಪುನಶ್ಚೇತನಗೊಳಿಸಿ, ನೀರು ಕೊಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

**▶▶ ಸಮಸ್ಯೆ ಇರುವೆಡೆ ನೀರು ಕೊಡುವಂತೆ ಶಾಸಕ ಸಿ,ಪುಟ್ಟರಂಗಶೆಟ್ಟಿ ಸೂಚನೆ**

ರಸ್ತೆ ಅಭಿವೃದ್ದಿಗೆ ಸಂಬಂಧಿಸಿದಂತೆ ಶಾಸಕರು ಪ್ರತಿಕ್ರಿಯಿಸಿ, 'ಒಳಚರಂಡಿ ಕಾಮಗಾರಿ ಮುಗಿದಿರುವ ಕಡೆ ರಸ್ತೆ ಅಭಿವೃದ್ದಿಗೆ ಕ್ರಮವಹಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ರಾಮಸಮುದ್ರದ ಚಿಕ್ಕಬೀದಿ ನಿವಾಸಿಗಳು ತಮ್ಮ ವಾರ್ಡಿನಲ್ಲಿ ಅಂಬೇ ಡ್ಕರ್ ಸಮುದಾಯ ಭವನ ನಿರ್ಮಿಸಿಕೊಡಬೇಕು, ದೊಡ್ಡಬೀದಿ ನಿವಾಸಿಗಳು' ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ಸರ್ಕಾರದಿಂದ ಹಣಮಂಜೂರು ಮಾಡಿಸಿಕೊಡಬೇಕು, ಬುದ್ದನಗರದಲ್ಲಿ ಹೊಸದಾಗಿ ಸುಸಜ್ಜಿತ ಗ್ರಂಥಾಲಯ ನಿರ್ಮಿಸಿಕೊಡುವಂತೆ ಶಾಸಕರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ,ಚೂಡಾ ಮಾಜಿ ಅಧ್ಯಕ್ಷ ಸೈಯದ್‌ರಫೀ, ಜಿ,ಪಂ ಕೆ,ಡಿ,ಪಿ ಸದಸ್ಯ ಸೈಯದ್ ಮುಸಾಯಿದ್ ಮಾಜಿ ನಗರಸಭಾ ಸದಸ್ಯರಾದ ನಾಗರಾಜು,ಬಸವರಾಜು, ಆರ್.ಎಂ.ರಾಜಪ್ಪ, ಜಿಲ್ಲಾ ಜನಹಿತಾಶಕ್ತಿ ಹೋರಾಟ ಸಮಿತಿ ಅಧ್ಯಕ್ಷ ರಾಮಸಮುದ್ರ ಸುರೇಶ್, ಮಹದೇವಸ್ವಾಮಿ, ಮಹೇಶ್,, ಸ್ವಾಮಿ, , ನಗರಸಭೆ ಜೆಇ ರಾಜು ಇತರರು ಹಾಜರಿದ್ದರು.

# ಗುರಿ ಇಟ್ಟುಕೊಂಡು ಸಾಧನೆ ಮಾಡಿ: ರೇಖಾ



ಮೈಸೂರು: ವಿದ್ಯಾರ್ಥಿಗಳು ಶ್ರದ್ಧೆ, ಭಕ್ತಿಯಿಂದ ಗುರಿ ಇಟ್ಟುಕೊಂಡು ಸಾಧನೆ ಮಾಡುವ ಮುಖಾಂತರ ಜೀವನದಲ್ಲಿ ಯಶಸ್ಸನ್ನು ಕಾಣಬೇಕು ಎಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ತಾಲ್ಲೂಕು ಕಲ್ಯಾಣ ಅಧಿಕಾರಿ ರೇಖಾ ತಿಳಿಸಿದರು.

ಕುವೆಂಪುನಗರದಲ್ಲಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊ ಡುಗೆ ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದು, ಅಭಿನಂ ದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಜೀವನವನ್ನು ಸುಂದರವಾಗಿ ರೂಪಿಸಿಕೊಂಡು ಸಮಾಜದ ಸತ್‌ಪ್ರಜೆಗಳಾಗಿ ರೂಪು ಗೊಳ್ಳಬೇಕು ಗುರುಹಿರಿಯರಿಗೆ ಗೌರವ ಕೊಡಬೇಕು. ಈ ದೇಶದ ಏಳಿಗೆಗೆ ಶ್ರಮಿಸಬೇಕು ವಿದ್ಯೆ ಜೊತೆಗೆ ಸತತ ಪರಿಶ್ರಮ ಆತ್ಮವಿಶ್ವಾಸವಿದ್ದರೆ ಯಶಸ್ಸನ್ನು ಕಾಣಬಹುದು. ಬಿ.ಸಿ.ಎಂ. ಹಾಸ್ಟೆಲ್‌ನಲ್ಲಿ ಓದಿದ ರಾಘವೇಂದ್ರ ಈಗ ಇಲ್ಲೇ ಅಧಿಕಾರಿಯಾಗಿದ್ದಾರೆ. ಮಂಡ್ಯದಲ್ಲಿ ಕುಮಾರ್ ಜಿಲ್ಲಾಧಿಕಾರಿಯಾಗಿದ್ದಾರೆ. ನೀವು ಸಹ ಅವರನ್ನು ಮಾದರಿಯಾಗಿ ಇಟ್ಟುಕೊಂಡು ಸಾಧನೆ ಮಾಡಬೇಕು, ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದರು.

ನಿಲಯಪಾಲಕರಾದ ಜಗದೀಶ್ ಕೋರಿ ಮಾತನಾಡಿ, ಡಿ.ದೇವರಾಜ ಅರಸು ವಿದ್ಯಾರ್ಥಿನಿಲಯದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಶ್ರಮಜೀವಿಗಳು, ಶ್ರದ್ಧೆ ಭಕ್ತಿ ಮತ್ತು ಬದ್ಧತೆಯಿಂದ ಗುರಿ ಇಟ್ಟುಕೊಂಡರೆ ಸಾಧನೆ ಮಾಡಬಹುದು. ನಿಮ್ಮ ಅನುಕೂಲಕ್ಕಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಪಾಠ ಮಾಡಿಸುತ್ತಿದ್ದೇವೆ. ನೀವೆಲ್ಲರೂ ಸರ್ಕಾರದ ಸವಲತ್ತುಗಳನ್ನು ಉಪಯೋಗಿಸಿಕೊಂಡು ಉನ್ನತ ಹುದ್ದೆಗಳನ್ನು ಅಲಂಕರಿಸಿ ಯಶಸ್ಸು ಕಾಣಬೇಕು ಎಂದರು. ಸಮಾರಂಭದಲ್ಲಿ ವಿಸ್ತರಣಾಧಿಕಾರಿ ಸುಜೇಂದ್ರಕುಮಾರ್, ನಿಲಯ ಪಾಲಕರುಗಳಾದ ಮಹಾಲಕ್ಷ್ಮಿ, ನಾಗರತ್ನ, ನಾಗರಾಜ್, ರಮ್ಯ, ಅನುಪಮ, ರೇಖಾ, ಭಾಗ್ಯಲಕ್ಷ್ಮಿ, ಪರಮೇಶ್ವರಪ್ಪ, ಧನಂಜಯ, ತೇಜಸ್ವಿನಿ, ಅರ್ಪಿತ, ಲೋಕೇಶ್ ಹಾಜರಿದ್ದರು.

# ಕಕಜ ವೇದಿಕೆಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ಚನ್ನಪಟ್ಟಣ: ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ವತಿಯಿಂದ 2025-26ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದ ಗಣ್ಯರಿಗೆ ಸನ್ಮಾನ ಸಮಾರಂಭವನ್ನು ಸೋಮವಾರ ಪಟ್ಟಣದ ಕೊಲ್ಲಾಪುರದಮ್ಮ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿತ್ತು.

ವೇದಿಕೆಯ ರಾಜ್ಯಾಧ್ಯಕ್ಷ ರಮೇಶ್ಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ಹೆಚ್ಚಿನ ಸಾಧನೆ ಮಾಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು ಮುಂದಿನ ಉನ್ನತ ಶಿಕ್ಷಣದಲ್ಲೂ ಇದೇ ಸಾಧನೆ ಮುಂದುವರಿಸಿ ಪೋಷಕರಿಗೆ ಹಾಗೂ ತಾಲೂಕಿಗೆ ಕೀರ್ತಿ ತರಬೇಕು ಎಂದು ಕಿವಿಮಾತು ಹೇಳಿದರು.ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಟಿ.ವಿ. ಶಂಕರ್ ಅವರು, ಯುವಜನತೆ ಶಿಕ್ಷಣದ ಜೊತೆಗೆ ದೈಹಿಕ ಆರೋಗ್ಯಕ್ಕೂ ಒತ್ತು ನೀಡಬೇಕು. ಸೈಕಲ್ ಸವಾರಿ ಮತ್ತು ವ್ಯಾಯಾಮಗಳನ್ನು ರೂಢಿಸಿ ಕೊಳ್ಳುವುದರಿಂದ ಮಾನಸಿಕ ಹಾಗೂ ದೈಹಿಕ ಆರೋಗ್ಯ ಕಾಪಾಡಿಕೊ ಳ್ಳಬಹುದು ಎಂದು ತಿಳಿಸಿದರು. ಮತ್ತೊಬ್ಬ ಅತಿಥಿ ಡಾ. ರಾಜಶ್ರೀ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಕಾಲಿಡುವಾಗ ಕೀಳರಿಮೆ ಬಿಟ್ಟು, ಉತ್ತಮ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ನಗರಸಭಾ ಸದಸ್ಯ ವಾಸಿಲ್ ಅಲಿಖಾನ್, ಪರಿಸರ ಸಂರಕ್ಷಣೆಗಾಗಿ ಪ್ಲಾಸ್ಟಿಕ್ ಮುಕ್ತ ನಗರ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಸಹಕರಿಸಬೇಕು ಎಂದು ಮನವಿ ಮಾಡಿದರು. ಸಮಾರಂಭದಲ್ಲಿ ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಹಲವು ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು. 28ಕ್ಕೂ ಹೆಚ್ಚು ಗ್ರಾಮಗಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಒಕ್ಕೂಟದ ಜಿಲ್ಲಾಧ್ಯಕ್ಷ ಬೇವೂರು ಯೋಗೇಶ್ಗೌಡ, ಮಹಿಳಾ ಹೋರಾಟಗಾರ್ತಿ ಸುಕನ್ಯಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

## ಮರುಮೌಲ್ಯಮಾನದ ನಂತರ ಅತಿ ಹೆಚ್ಚು ಅಂಕಗಳಿಸಿದ ಅಲ್ಫಿಯಾ ನೂರೈನ್

ರಾಮನಗರ: ದ್ವಿತೀಯ ಪಿಯೂ ಪರೀಕ್ಷೆ ಉತ್ತರ ಪತ್ರಿಕೆಯ ಮೌಲ್ಯಮಾಪನದ ನಂತರ ಅಂಕಗಳಿಕೆ ಹೆಚ್ಚಾದ ಹಿನ್ನಲೆಯಲ್ಲಿ ಇಲ್ಲಿನ ಹೋಲಿ ಕ್ರಸೆಂಟ್ ಪಿಯೂ ಕಾಲೇಜಿ ವಿದ್ಯಾರ್ಥಿನಿ ಅಲ್ಫಿಯಾ ನೂರೈನ್ ರಾಮನಗರ ತಾಲ್ಲೂಕಿನಲ್ಲೇ ಅತಿ ಹೆಚ್ಚು ಅಂಕಗಳಿಸಿದ ಮೊದಲ ವಿದ್ಯಾರ್ಥಿ ಎಂಬ ಕೀರ್ತಿಯನ್ನು ಗಳಿಸಿಕೊಂಡಿದ್ದಾರೆ.



ಪಿಸಿಎಂಬಿ ವಿಷಯದಲ್ಲಿ ಅತಿ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಮೊದಲ ವಿದ್ಯಾರ್ಥಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಈ ಕುರಿತು ಕಾಲೇಜಿನ ಪ್ರಕಟಣೆಯಲ್ಲಿ ಕಾರ್ಯದರ್ಶಿ ಅಲ್ತಾಫ್ ಅಹಮದ್ ತಮ್ಮ ಸಂತಸವನ್ನು ಹಂಚಿಕೊಂಡಿದ್ದಾರೆ. ಅಲ್ಫಿಯಾ ನೂರೈನ್, ದ್ವಿತೀಯ ಪಿಯೂಸಿಯ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದರು. ದ್ವಿತೀಯ ಪಿಯೂ ಪರೀಕ್ಷೆಯಲ್ಲಿ ಒಟ್ಟು 591 ಅಂಕಗಳನ್ನು ಗಳಿಸಿದ್ದರು. ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದವರ ಪೈಕಿ ದ್ವಿತೀಯ ಸ್ಥಾನಗಳಿಸಿಕೊಂಡಿದ್ದರು. ಆದರೆ ವಿದ್ಯಾರ್ಥಿನಿಗೆ ತಾವು ಪಡೆದ ಅಂಕಗಳ ಬಗ್ಗೆ ಸಮಾಧಾನ ಇರಲಿಲ್ಲ. ಹೀಗಾಗಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಮರುಮೌಲ್ಯ ಮಾಪನದಲ್ಲಿ ಇಂಗ್ಲೀಷ್ ವಿಷಯದಲ್ಲಿ ಹೆಚ್ಚುವರಿ 3 ಅಂಕಗಳನ್ನು ಪಡೆದುಕೊಂಡು ಒಟ್ಟು 594 ಅಂಕಗಳನ್ನು ಗಳಿಸಿದರು. ಮೂರು ಅಂಕಗಳ ಗಳಿಕೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಆಕೆಯ ಸ್ಥಾನವನ್ನು ಗಳಿಸಿಕೊಟ್ಟಿದೆ. ರಾಮನಗರ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ ಎಂಬ ಕೀರ್ತಿಗೆ ಆಕೆ ಪಾತ್ರರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನಕ್ಕೇರಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷೆ ಡಾ. ಶಾಜಿಯಾ, ಕಾಲೇಜಿನ ಮುಖ್ಯಸ್ಥರಾದ ಡಾ, ಫ್ರಕೃದ್ದಿನ್ , ಪ್ರಾಂಶುಪಾಲ ಸ್ಟ್ಯಾನ್ಲಿ ಪಾಲ್, ಉಪ ಪ್ರಾಂಶುಪಾಲ ಅರುಣ್ ಕವಣಾಪುರ ಮುಂತಾದವರು ವಿದ್ಯಾರ್ಥಿನಿ ಅಲ್ಫಿಯಾ ನೂರೈನ್ ಅವರನ್ನು ಶ್ಲಾಘಿಸಿದ್ದಾರೆ.

# ಗ್ಯಾರಂಟಿ ಸಮರ್ಪಕವಾಗಿ ತಲುಪಿಸಿ

## ಅಧಿಕಾರಿಗಳಿಗೆ ಎಂ.ಜಿ. ಮೋಹನ್ ದಾಸ್ ಸೂಚನೆ | ಪ್ರಗತಿ ಪರಿಶೀಲನಾ ಸಭೆ



ಮಡಿಕೇರಿ: ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳ ಪ್ರಯೋಜನವು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಈ ನಿಟ್ಟಿನಲ್ಲಿ ಫಲಾನುಭವಿಗಳ ಹಿತರಕ್ಷಣೆ ಮಾಡುವುದು ಪ್ರತಿಯೊಬ್ಬ ಅಧಿಕಾರಿಯ ಆದ್ಯ ಕರ್ತವ್ಯವಾಗಿದೆ ಎಂದು ಮಡಿಕೇರಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಎಂ.ಜಿ. ಮೋಹನ್ ದಾಸ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಗರದ ತಾಲ್ಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಬುಧವಾರ ಆಯೋಜಿಸಲಾಗಿದ್ದ ಮಡಿಕೇರಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ಸರ್ಕಾರದ ಯೋಜನೆಗಳು ಕೇವಲ ಅಂಕಿ-ಅಂಶಗಳಿಗೆ ಸೀಮಿತವಾಗದೆ, ಅರ್ಹರಿಗೆ ಕಾಲಮಿತಿಯೊಳಗೆ ತಲುಪಿದಾಗ ಮಾತ್ರ ಯೋಜನೆಯ ಮೂಲ ಉದ್ದೇಶ ಸಫಲವಾಗುತ್ತದೆ. ಹೀಗಾಗಿ ಇಲಾಖಾ ಸಮನ್ವಯದೊಂದಿಗೆ ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಅವರು ಕರೆ ನೀಡಿದರು.

### ಅನ್ನಭಾಗ್ಯ ಯೋಜನೆ: ಪಡಿತರ ಚೀಟಿಗಳ ಸಮಗ್ರ ಮಾಹಿತಿ

ಸಭೆಯಲ್ಲಿ ಅನ್ನಭಾಗ್ಯ ಯೋಜನೆಯ ಪ್ರಗತಿಯ ಕುರಿತು ಮಾಹಿತಿ ನೀಡಿದ ಆಹಾರ ನಿರೀಕ್ಷಕರಾದ ವಿ.ಪಿ. ವೀಣಾ ಅವರು, ಮಡಿಕೇರಿ ತಾಲ್ಲೂಕಿನಲ್ಲಿ ಪ್ರಸ್ತುತ ಒಟ್ಟು 38,270 ಪಡಿತರ ಚೀಟಿಗಳಿದ್ದು, ಒಟ್ಟು 1,20,974 ಫಲಾನುಭವಿಗಳಿದ್ದಾರೆ ಎಂದು ತಿಳಿಸಿದರು. ಇವುಗಳಲ್ಲಿ 1,902 ಎಎವೈ (ಅಂತ್ಯೋದಯ) ಪಡಿತರ ಚೀಟಿಗಳಿದ್ದು, ಇವುಗಳ ಮೂಲಕ 7,569 ಜನರಿಗೆ ಸೌಲಭ್ಯ ದೊರೆಯುತ್ತಿದೆ. ಹಾಗೆಯೇ 21,697 ಪಿಹೆಚ್ಹೆಚ್ ಪಡಿತರ ಚೀಟಿಗಳ ಮೂಲಕ 70,196 ಫಲಾನುಭವಿಗಳು ಹಾಗೂ 14,671 ಎನ್ಪಿಹೆಚ್ಹೆಚ್ ಚೀಟಿಗಳ ಮೂಲಕ 43,206 ಫಲಾನುಭವಿಗಳು ಯೋಜನೆಯಡಿ ನೋಂದಾಯಿಸಿಕೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ತಾಲ್ಲೂಕಿನಲ್ಲಿ ಈವರೆಗೆ 1,375 ಪಡಿತರ ಚೀಟಿಗಳನ್ನು ಅನರ್ಹ ಎಂದು ಗುರುತಿಸಲಾಗಿದೆ. ಪ್ರಸ್ತುತ ಹೊಸ ಪಡಿತರ ಚೀಟಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಲೇವಾರಿ, ವಿಳಾಸ ಬದಲಾವಣೆ ಹಾಗೂ ಹೆಸರು ಸೇರ್ಪಡೆ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದಾಯ ತೆರಿಗೆ ಪಾವತಿದಾರರೆಂಬ ಕಾರಣಕ್ಕೆ ಅನರ್ಹಗೊಂಡಿದ್ದ ಬಿಪಿಎಲ್ ಪಡಿತರ ಚೀಟಿಗಳಲ್ಲಿ 168 ಚೀಟಿಗಳು ಪುನಃ ಬಿಪಿಎಲ್ ಪಡೆಯಲು ಅರ್ಹವಾಗಿರುವುದು ಕಂಡುಬಂದಿದ್ದು, ಅವುಗಳಲ್ಲಿ 151 ಚೀಟಿಗಳನ್ನು ಎಪಿಎಲ್ನಿಂದ ಬಿಪಿಎಲ್ಗೆ ಬದಲಾಯಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದು ತಿಳಿಸಿದರು. ಅಲ್ಲದೆ, ಗೃಹಬಳಕೆಯ ಗ್ಯಾಸ್ ಸಿಲಿಂಡರ್ಗಳು ಕಾಳಸಂತೆಯಲ್ಲಿ ಮಾರಾಟವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದರು.

### ಶಕ್ತಿ ಯೋಜನೆ ಮತ್ತು ಸಾರಿಗೆ ಸಮಸ್ಯೆಗಳ ಚರ್ಚೆ

ಶಕ್ತಿ ಯೋಜನೆಯ ಅನುಷ್ಠಾನದ ನಂತರ ಕೆಎಸ್‌ಆರ್ಟಿಸಿ ಬಸ್ಸಗಳಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ ಎಂದು ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಶೇಖರ್ ತಿಳಿಸಿದರು. ಸಮಿತಿಯ ಸದಸ್ಯರಾದ ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ ಅವರು ಮಾತನಾಡಿ, ಅಶ್ವಮೇಧ ಬಸ್ಸಗಳಲ್ಲಿ ಚಾಲಕರೇ ನಿರ್ವಾಹಕರಾಗಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಪ್ರಯಾಣಿಕರಿಗೆ ಟಿಕೆಟ್ ಪಡೆಯಲು ಸಮಸ್ಯೆಯಾಗುತ್ತಿದೆ. ಹಮ್ಮಿಯಾಲದಂತಹ ಮಲೆನಾಡು ಭಾಗಗಳಿಗೆ ಉತ್ತಮ ಸ್ಥಿತಿಯಲ್ಲಿರುವ ಬಸ್ಸಗಳನ್ನು ನೀಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಸ್ಪಂದಿಸಿದ ಕೆಎಸ್‌ಆರ್ಟಿಸಿ ಪ್ರತಿನಿಧಿ ದಯಾನಂದ್ ಅವರು, ರಾತ್ರಿ ವೇಳೆ ಬೆಂಗಳೂರು-ಮಂಗಳೂರು ಬಸ್ಸಗಳು ನಿಲ್ದಾಣಕ್ಕೆ ಬರುವಂತೆ ಕ್ರಮ ಕೈಗೊಳ್ಳಲಾಗುವುದು ಮತ್ತು ಗ್ರಾಮೀಣ ಭಾಗಗಳಲ್ಲಿ ಬಸ್ ನಿಲುಗಡೆಗೆ ನಿರ್ವಾಹಕರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

### ಗೃಹಲಕ್ಷ್ಮಿ ಮತ್ತು ಯುವನಿಧಿ ಯೋಜನೆಗಳ ಪ್ರಗತಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿ.ಪಿ. ಸವಿತಾ ಮಾತನಾಡಿ, ಗೃಹಲಕ್ಷ್ಮಿ ಯೋಜನೆಯಡಿ ಫೆಬ್ರವರಿ ತಿಂಗಳಲ್ಲಿ 29ನೇ ಕಂತಿನ ಹಣವನ್ನು ಪಾವತಿಸಲಾಗಿದೆ. ತಾಲ್ಲೂಕಿನ 30,641 ಫಲಾನುಭವಿಗಳ ಖಾತೆಗೆ ಒಟ್ಟು 6,12,82,000 ರೂಪಾಯಿಗಳನ್ನು ನೇರವಾಗಿ ವರ್ಗಾಯಿಸುವ ಮೂಲಕ ಶೇಕಡವಾರು ಸಾಧನೆ ಮಾಡಲಾಗಿದೆ ಎಂದರು.

ಯುವನಿಧಿ ಯೋಜನೆಯ ಕುರಿತು ಚರ್ಚಿಸಿದ ಅಧ್ಯಕ್ಷ ಮೋಹನ್ ದಾಸ್ ಅವರು, ನಿರುದ್ಯೋಗಿ ಪದವೀಧರರಿಗೆ ನೀಡುವ ಈ ಭತ್ಯೆ ಪಾವತಿಯಲ್ಲಿ ಯಾವುದೇ ವಿದ್ಯಾರ್ಥಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ತಾಲ್ಲೂಕಿನ ಕಾಲೇಜುಗಳಲ್ಲಿ ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಮತ್ತು ಅಂತಹ ಸಭೆಗಳಿಗೆ ಸಮಿತಿಯ ಸದಸ್ಯರನ್ನು ಅಧಿಕೃತವಾಗಿ ಆಹ್ವಾನಿಸಬೇಕು ಎಂದು ತಿಳಿಸಿದರು. ಜಿಲ್ಲಾ ಉದ್ಯೋಗಾಧಿಕಾರಿ ಸಿ.ಬಿ. ಮಂಜುನಾಥ್ ಅವರು ಪ್ರತಿಕ್ರಿಯಿಸಿ, ನೋಂದಣಿ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದ್ದು, ಫಲಾನುಭವಿಗಳ ಖಾತೆಗೆ ಹಣ ಜಮೆಯಾಗುತ್ತಿದೆ ಎಂದರು. ಸಭೆಯಲ್ಲಿ ಸಮಿತಿಯ ಸದಸ್ಯರಾದ ಬಿ.ಎನ್. ರಂಗಪ್ಪ, ಎ.ಎಂ. ಸೋಮಯ್ಯ, ಕೆ.ಕೆ. ರಾಜೇಶ್ವರಿ, ಬಿ.ಜಿ. ಕೌಶಿಕ್ ಕುಟ್ಟಯ್ಯ ಸೇರಿದಂತೆ ಹಲವು ಮುಖಂಡರು ಸಲಹೆ ಸೂಚನೆಗಳನ್ನು ನೀಡಿದರು.

### ಗೃಹಜ್ಯೋತಿ, ಮೂಲ ಸೌಕರ್ಯ ನಿರ್ವಹಣೆ

ಗೃಹಜ್ಯೋತಿ ಯೋಜನೆಗೆ ಸಂಬಂಧಿಸಿದಂತೆ ಮಾತನಾಡಿದ ಸೆಸ್ಕ್ ಎಇ ಚೈತ್ರಾ ಅವರು, ನಾಪೋಕ್ಲು ಭಾಗದಲ್ಲಿ ಗದ್ದೆಗಳ ಮಧ್ಯೆ ಇದ್ದ ವಿದ್ಯುತ್ ಮಾರ್ಗಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸಲಾಗಿದೆ. ನಗರ ವ್ಯಾಪ್ತಿಯಲ್ಲಿ ಹಳೆಯ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲಾಗುತ್ತಿದೆ ಎಂದರು. ಸದಸ್ಯರಾದ ಮಿಟ್ಟು ಸೋಮಯ್ಯ, ಇಬ್ರಾಹಿಂ ಮತ್ತು ರಘು ಅವರು ಸಾರ್ವಜನಿಕ ಓಡಾಟಕ್ಕೆ ಅಡ್ಡಿಯಾಗಿರುವ ಕಂಬಗಳು ಮತ್ತು ಟ್ರಾನ್ಸ್ಫಾರ್ಮರ್ಗಳನ್ನು ತಕ್ಷಣ ಸ್ಥಳಾಂತರಿಸುವಂತೆ ಮನವಿ ಮಾಡಿದರು.

# ಉರುಳಿಗೆ ಸಿಲುಕಿ ಜಿಂಕೆ ಸಾವು

ಚಾಮರಾಜನಗರ, ಬಿ ಆರ್ ಟಿ ಹುಲಿ ಸಂರಕ್ಷಿತ ಪ್ರದೇಶ ಕೆ. ಗುಡಿ ವನ್ಯಜೀವಿ ವಲಯ ಅಟ್ಟುಗುಳಿಪುರ ಗಸ್ತಿನ ಕೆಂಪಯ್ಯನ ಕೆರೆ ಬಳಿ ಉರುಳಿಗೆ ಸಿಲುಕಿ ಹೆಣ್ಣು ಜಿಂಕೆ ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ರಂಗಸಂದ್ರ ( ಬೂದಿಪಡಗ) ಗ್ರಾಮದ ಸುರೇಶ್ ಎಂಬಾತ ಅರಣ್ಯ ಪ್ರದೇಶದೊಳಗೆ ಪ್ರವೇಶಿಸಿ ಅಕ್ರಮವಾಗಿ ಪ್ರಾಣಿಗಳ ಭೇಟೆಯಾಡುತ್ತಿದ್ದ. ಈ ಸಂದರ್ಭದಲ್ಲಿ ಪ್ರಾಣಿಗಳಿಗೆ ಬಲೆ ಬೀಸಲು ಹಾಕಿದ್ದ ಉರುಳಿಗೆ ಜಿಂಕೆ ಸಿಲುಕಿ ಮೃತಪಟ್ಟಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿತ ಸುರೇಶ್ ನನ್ನ ಬಂಧಿಸಿ ನ್ಯಾಯಾಂಗಬಂಧನಕ್ಕೆ ಒಪ್ಪಿಸಿದ್ದಾರೆ.

# ಟಿಪ್ಪರ್ ಮೊಗಚಿ ಚಾಲಕ ಸಾವು

ಚಾಮರಾಜನಗರ, ತಾಲ್ಲೂಕಿನ ಕುರುಬರ ಹುಂಡಿ ಗ್ರಾಮದ ಹೊರವಲಯದ ಕ್ವಾರಿಯ ಬಳಿ ಟಿಪ್ಪರ್ ಮೊಗಚಿ ಚಾಲಕ ಮೃತಪಟ್ಟಿರುವ ದುರ್ಘಟನೆ ನಡೆದಿದೆ.

ಅಮ್ಮನಪುರ ಗ್ರಾಮದ ಶಿವಕುಮಾರ್ (,45) ಮೃತಪಟ್ಟ ವ್ಯಕ್ತಿ. ವಾಹನದ ಬ್ರೇಕ್ ವೈಫಲ್ಯದಿಂದ ಈ ಘಟನೆ ಸಂಭವಿಸಿರಬಹುದೆಂದು ಶಂಕಿಸಲಾಗಿದೆ. ವಿಷಯ ತಿಳಿದ ತಕ್ಷಣ ಪೂರ್ವ ಠಾಣೆ ಪೊಲೀಸರು ಹಾಗೂ ಕಾರ್ಮಿಕ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರು. ಬಳಿಕ ಮೃತ ದೇಹವನ್ನು ಸಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು.

# ಉತ್ತಮ ಚಿತ್ರಾಕೃತಿ ಮೂಡಿಬರಲು ಕೈಚಳಕ ಅಗತ್ಯ



ಚಾಮರಾಜನಗರ: ತಮ್ಮ ಕೈ ಚಳಕದಿಂದ ಕಣ್ಮನ ಸೆಳೆಯುವ ಹೊಸ ಹೊಸ ಸಂವೇದನಾಶೀಲ ಚಿತ್ರಗಳನ್ನು ಬಿಡಿಸುವ ಪ್ರತಿಭಾವಂತ ಚಿತ್ರ ಕಲಾವಿದ ಹೆಚ್. ಮಹದೇವು ಎಂದು ರಂಗತರಂಗ ಟ್ರಸ್ಟ್ ಅಧ್ಯಕ್ಷರು, ಸಾಹಿತಿ ಸೋಮಶೇಖರ ಬಿಸಲ್ವಾಡಿ ತಿಳಿಸಿದರು.

ನಗರದ ಹೌಸಿಂಗ್ ಬೋಡ್ ?ಕಾಲೋನಿಯಲ್ಲಿನ ಕಲಾವಿದ ಮಹದೇವು ಅವತ ನಿವಾಸದಲ್ಲಿ ಚಾಮರಾಜನಗರ ರಂಗತರಂಗ ಟ್ರಸ್ಟ್ ಮತ್ತು ಜನಹಿತಾಶಕ್ತಿ ಹೋರಾಟ ವೇದಿಕೆ ವತಿಯಿಂದ ಏರ್ಪಡಿಸಿದ್ದ ಲಲಿತಾ ಕಲಾ ಅಕಾಡೆಮಿ ಕೊಡಮಾಡುವ "ವರ್ಣಶ್ರೀ" ಪ್ರಶಸ್ತಿಗೆ ಭಾಜನರಾದ ಜಿಲ್ಲೆಯ ಹನೂರು ತಾಲ್ಲೂಕಿನ ಕಣ್ಣೂರು ಮಂಗಲ ಗ್ರಾಮದ ಕುಂಚ ಕಲಾವಿದ ಮಹದೇವು ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು. ಕಲಾವಿದರು ಸೂಕ್ಷ್ಮ ಸಂವೇದನೆ, ಕೌಶಲ್ಯ ಯುಕ್ತ ಕೈಚಳಕ ಮತ್ತು ವಿಶಿಷ್ಟ ಬಗೆಯ ದೃಷ್ಟಿಕೋನ ಕರಗತ ಮಾಡಿಕೊಂಡಾಗಲೇ ಉತ್ತಮ ಚಿತ್ರಾಕೃತಿ ಮೂಡಿಬರುತ್ತದೆ. ಮಹದೇವು ಅವರು ಮೈಸೂರು ದಸರಾ ಜಂಬೂ ಸವಾರಿಗೆ ಚಾಮರಾಜನಗರ ಮತ್ತು ರಾಮನಗರ ಜಿಲ್ಲೆಯ ದಸರಾ ಸ್ತಬ್ಧ ಚಿತ್ರಗಳನ್ನು ವಿನ್ಯಾಸಗೊಳಿಸಿ 5 ಬಾರಿ ಜಿಲ್ಲೆಗೆ ಪ್ರಥಮ ಸ್ಥಾನ ತಂದು ಕೊಟ್ಟಿದ್ದಾರೆ. ಸಮಾಜ ಕಲ್ಯಾಣ ಇಲಾಖೆಗಾಗಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣದ ಚಿತ್ರಾಕೃತಿ ಮಾಡಿ ಕೊಟ್ಟಿದ್ದಾರೆ. ರಾಷ್ಟ್ರೀಯ ವರ್ಣಸಿರಿ ಪ್ರಶಸ್ತಿ, ಚಾಮರಾಜನಗರ ಜಿಲ್ಲಾಡಳಿತದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಸನ್ಮಾನಗಳು ಇವರನ್ನು ಹರಸಿ ಬಂದಿವೆ ಎಂದರು.

ಜನ ಹಿತಾಸಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್, ಉಪನ್ಯಾಸಕ ಶ್ರೀನಿವಾಸಮೂರ್ತಿ, ದಸಂಸ ಜಿಲ್ಲಾ ಸಂಯೋಜಕ ಕೆರೆಹಳ್ಳಿ ಬಸವರಾಜು , ಪರಶಿವಮೂರ್ತಿ, ಇದಾಯತ್ ಷರೀಫ್, ಮಾರುತಿ ಹಾಜರಿದ್ದರು.

# ಗಂಟು ರೋಗಕ್ಕೆ ಎತ್ತು ಬಲಿ: ಪಶುಸಂಗೋಪನಾ ಇಲಾಖೆಯ ನಿರ್ಲಕ್ಷ್ಯ ಖಂಡಿಸಿ ರೈತರ ಆಕ್ರೋಶ



ಕೆ.ಆರ್.ಪೇಟೆ ಪಟ್ಟಣದ ಅಗ್ರಹಾರ ಬಡಾವಣೆಯಲ್ಲಿ ಪಶುಸಂಗೋಪನಾ ಇಲಾಖೆಯ ನಿರ್ಲಕ್ಷ್ಯದಿಂದಾಗಿ ಗಂಟು ರೋಗಕ್ಕೆ ಎತ್ತೊಂದು ಬಲಿಯಾಗಿದ್ದು, ಇದನ್ನು ಖಂಡಿಸಿ ರೈತರು ಪಶು ಆಸ್ಪತ್ರೆಯ ಮುಂಭಾಗದ ಮುಖ್ಯ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಇಲ್ಲಿನ ಸುಬಾಷ್ ಎಂಬ ರೈತರು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಖರೀದಿಸಿದ್ದ ಜೋಡಿ ಎತ್ತುಗಳಿಗೆ ಗಂಟು ರೋಗ ತಗುಲಿದ್ದು, ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಸೂಕ್ತ ಚಿಕಿತ್ಸೆ ನೀಡದ ಕಾರಣ ಒಂದು ಎತ್ತು ಮೃತಪಟ್ಟಿದೆ ಎಂದು ರೈತರು ಆರೋಪಿಸಿದ್ದಾರೆ.

ಇಲಾಖೆಯು ಗ್ರಾಮೀಣ ಭಾಗಗಳಲ್ಲಿ ಮಾತ್ರ ಲಸಿಕೆ ನೀಡುತ್ತಿದ್ದು, ಪಟ್ಟಣ ಪ್ರದೇಶದ ಜಾನುವಾರುಗಳನ್ನು ನಿರ್ಲಕ್ಷಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಕೂಡಲೇ ಹಿರಿಯ ಅಧಿಕಾರಿಗಳು ಹಾಗೂ ಶಾಸಕರು ಈ ಬಗ್ಗೆ ಗಮನಹರಿಸಿ ಮುಂದಿನ ದಿನಗಳಲ್ಲಿ ಇಂತಹ ಸಾವುಗಳು ಸಂಭವಿಸದಂತೆ ಸೂಕ್ತ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

## ಡಾ.ಶ್ರೀ.ನಿರ್ಮಲಾನಂದನಾಥ ಸ್ವಾಮೀಜಿ ಪುತ್ಥಳಿ ಅನಾವರಣ

# ಲಲಿತಾದ್ರಿಪುರದಲ್ಲಿ ಕೆಂಪೇಗೌಡರ ಪುತ್ಥಳಿ ಅನಾವರಣ



ಮೈಸೂರು: ನಗರದ ಲಲಿತಾದ್ರಿಪುರ ಗ್ರಾಮದಲ್ಲಿ ಸೋಮವಾರ ನಾಡಪ್ರಭು ಕೆಂಪೇಗೌಡರ ಪುತ್ಥಳಿ ಅನಾವರಣ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಲಲಿತಾದ್ರಿಪುರದ ಶ್ರೀ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ಶ್ರೀ.ನಿರ್ಮಲಾನಂದನಾಥ ಸ್ವಾಮೀಜಿ ಪುತ್ಥಳಿ ಅನಾವರಣಗೊಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ, "ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಫಲವಾಗಿ ಬೆಂಗಳೂರು ನಗರ ನಿರ್ಮಾಣ ಆಯಿತು. ಅಂದಿನ ಕಾಲಘಟ್ಟದಲ್ಲಿ ಕೆರೆ ಕಟ್ಟೆಗಳನ್ನು ಕಟ್ಟುವ ಮೂಲಕ ನೀರಿನ ಸಂರಕ್ಷಣೆಗೆ ಮುನ್ನುಡಿ ಬರೆದರು. ನಮಗೆ ಕೆಂಪೇಗೌಡರು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ ಎಂದರು.

ಕೇವಲ ಅಧಿಕಾರಕ್ಕೋಸ್ಕರ ರಾಜಕಾರಣಕ್ಕೆ ಬರಬಾರದು. ಸೇವಾ ಮನೋಭಾವನೆ ಇರಬೇಕು. ಜನರು ನನ್ನ ಮೇಲೆ ತೋರಿಸುತ್ತಿರುವ ಪ್ರೀತಿಗೆ ನಾನು ಚಿರ ಋಣಿಯಾಗಿರುತ್ತೇನೆ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಆಯಾ ಕಾಲ ಘಟ್ಟಕ್ಕೆ ತಕ್ಕಂತೆ ಅಧಿಕಾರ ಬದಲಾಗುತ್ತದೆ. ಚಾಮುಂಡೇಶ್ವರಿ ಭಕ್ತನಾಗಿ ಒಂದು ಮಾತನ್ನು ಹೇಳುತ್ತೇನೆ. ನನೆಗುದಿಗೆ ಬಿದ್ದಿರುವ ಸಮುದಾಯ ಭವನದ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತೇನೆ. ನಿಮ್ಮೆಲ್ಲರ ಆಶೀರ್ವಾದ ಪ್ರೀತಿಯನ್ನು ನಾವು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಶಾಸಕರಾದ ಜಿ.ಡಿ.ಹರೀಶ್ ಗೌಡ, ಕೆ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜೆ.ಗಂಗಾಧರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ, ಮಾಜಿ ಸಚಿವರಾದ ಸಾ.ರಾ.ಮಹೇಶ್, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ. ಶ್ರೀಧರ್, ಎಸ್.ಬಿ.ಎಂ. ಮಂಜು, ಜೆಡಿಎಸ್ ಯುವ ಘಟಕದ ಅಧ್ಯಕ್ಷ ಮದನ್ ಸೇರಿ ಇತರರು ಉಪಸ್ಥಿತರಿದ್ದರು.

# ಮಹಾನ್ ಮಾನವತವಾದಿ ಶೋಷಿತರ ಜೀವಂತ ಧ್ವನಿ ಅಂಬೇಡ್ಕರ್: ಆನಂದ್



**ಮಂಡ್ಯ :** ಭಾರತ ದೇಶಕ್ಕೆ 6 ಸಾವಿರ ವರ್ಷಗಳ ಅದ್ಭುತ ಇತಿಹಾಸವಿದೆ.ದೇಶದಲ್ಲಿ ದುರ್ಬಲರ ಮೇಲೆ ಆಗುತ್ತಿರುವ ಶೋಷಣೆ ವಿರುದ್ಧ ಹಲವಾರು ಮಹನೀಯರು ಹೋರಾಟ ಮಾಡಿದ್ದೂ ಪ್ರಮುಖವಾಗಿ ಡಾ. ಬಿ. ಆರ್. ಅಂಬೇಡ್ಕರ್ ರವರು ಶೋಷಣೆ ವಿರುದ್ಧ ದಿಟ್ಟ ಹೋರಾಟ ರೂಪಿಸಿದವರು ಹಾಗೂ ಶೋಷಿತರ ಜೀವಂತ ಧ್ವನಿ ಅವರು ಎಂದು ಮೈಸೂರು ವಿಶ್ವವಿದ್ಯಾನಿಲಯದ ನಿರ್ವಹಣಾ ಶಾಸ್ತ್ರ ವಿಭಾಗದ ಬಹುದ್ದೂರ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ನಿವೃತ್ತ ಪ್ರಾಧ್ಯಾಪಕರಾದ ಡಾ. ಆನಂದ್ ಡಿ. ರವರು ತಿಳಿಸಿದರು.

ಕಾಲೇಜು ಶಿಕ್ಷಣ ಇಲಾಖೆ, ಮಂಡ್ಯ ಸರ್ಕಾರಿ ಕಾಲೇಜು (ಸ್ವಾಯತ್ತ) ಸ್ನಾತಕ,ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಅಂಬೇಡ್ಕರ್ ವಿಚಾರ ವೇದಿಕೆ ವತಿಯಿಂದ ಮಹಿಳಾ ಕಾಲೇಜಿನ ವನರಂಗ ಸಭಾಂಗಣದಲ್ಲಿ ನಡೆದ

ಡಾ. ಬಿ.ಆರ್ ಅಂಬೇಡ್ಕರ್ ಅವರ 135 ನೇ ಜನ್ಮದಿನದ ಅಂಗವಾಗಿ ಸಮಾನತೆಯೆಡೆಗೆ ನಮ್ಮ ನಡಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾನೂನು ಮಂತ್ರಿಯಾಗಿ ಹಿಂದೂ ಕೋಡ್ ಬಿಲ್ 1950ರ ದಶಕದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಂದ ಮಂಡಿಸಲ್ಪಟ್ಟ ಐತಿಹಾಸಿಕ ಕಾನೂನು ಸುಧಾರಣೆಯಾಗಿದ್ದು,ಹಿಂದೂ ಸಮಾಜದಲ್ಲಿ ಮಹಿಳೆಯರಿಗೆ ಆಸ್ತಿ ಹಕ್ಕು, ವಿಚ್ಛೇದನ, ಏಕಪತ್ನಿತ್ವ ಮತ್ತು ದತ್ತು ಸ್ವೀಕಾರದಂತಹ ಸಮಾನ ಹಕ್ಕುಗಳನ್ನು ತರುವ ಮೂಲಕ ಲಿಂಗ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಸ್ಥಾಪಿಸಲು ಪ್ರಯತ್ನಿಸಿತು. ತೀವ್ರ ವಿರೋಧದ ನಂತರ ಕಾಯ್ದೆಯನ್ನು ಪ್ರತ್ಯೇಕ ಕಾಯ್ದೆಗಳಾಗಿ ಅಂಗೀಕರಿಸಲಾಯಿತು ಎಂದು ತಿಳಿಸಿದರು.

ಮಹಿಳೆಯರಿಗೆ ಶಿಕ್ಷಣ ನೀಡಿ ಸಂವಿಧಾನ ಬದ್ಧವಾದ ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡವ ನಿಟ್ಟನಲ್ಲಿ ಹೋರಾಟ ಮಾಡಿದವರು ಅವರು. ಸಮಾಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಹಾಗೂ ಜಾತೀಯತೆ ವಿರುದ್ಧ ಹೋರಾಡಿದವರು ಎಂದು ತಿಳಿಸಿದರು.

ಮಹಿಳೆಯರು ಡಾ. ಬಿ.ಆರ್ ಅಂಬೇಡ್ಕರ್ ಅವರ ಮೌಲ್ಯ,ಆದರ್ಶ, ಸಿದ್ಧಾಂತಗಳನ್ನು ಅರ್ಥೈಸಿಕೊಳ್ಳಬೇಕು. ಅವರು ಅನ್ಯಾಯ ಅಸಮಾನತೆ, ಶೋಷಣೆ ವಿರುದ್ಧ ಹೋರಾಡಿದವರು ಹಾಗೂ ಭಾರತೀಯರಿಗೆ ಇರಬೇಕಾದ ಸ್ಥಾನಮಾನಗಳ ಬಗ್ಗೆ ಚರ್ಚೆ ಮಾಡಿ, ಸಂಸದೀಯ ಮಾದರಿಯಲ್ಲಿ ಪ್ರಜಾಪ್ರಭುತ್ವ ಬೇಕು ಎಂದು ಪ್ರತಿಪಾದಿಸಿದವರು ಎಂದು ತಿಳಿಸಿದರು.

ಜಿಲ್ಲಾ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ಪ್ರಾಂಶುಪಾಲರಾದ ಪ್ರೊ.ಗುರುರಾಜ್ ಪ್ರಭು ಕೆ. ರವರು ಮಾತನಾಡಿ ಡಾ. ಬಿ. ಆರ್. ಅಂಬೇಡ್ಕರ್ ರವರು ಸಮಾಜದ ಪರಿವರ್ತಕರು ಹಾಗೂ ಮಾನವತಾವಾದಿ ಅವರ ಜೀವನ, ತತ್ವ ಸಿದ್ಧಾಂತಗಳು ಹಾಗೂ ವಿಚಾರಧಾರೆಗಳನ್ನು ವಿದ್ಯಾರ್ಥಿಗಳು ತಿಳಿದು ಜೊತೆಗೆ ಅನುಷ್ಠಾನ ಗೊಳಿಸುವ ನಿಟ್ಟಿನಲ್ಲಿ ಸಮಾಸಮಾಜವನ್ನು ನಿರ್ಮಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ) ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಭರತ್ ರಾಜ್ ಎಂ.ಜಿ,ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಸಯ್ಯದ್ ಕೌಸರ್ ಫಾತಿಮಾ, ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ. ಕೃಷ್ಣೇಗೌಡ ಹೆಚ್, ರಾಸಾಯನ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಕುಸುಮಾದೇವಿ ಎಸ್. ಗೆಜೆಟೆಡ್ ಮ್ಯಾನೇಜರ್ ರವಿಕುಮಾರ್ ಕೆ. ಪಿ. ಅಂಬೇಡ್ಕರ್ ವಿಚಾರ ವೇದಿಕೆ ಸಂಚಾಲಕರು ಡಾ. ಜಯರಾಮ್ ಆರ್,ಅಂಬೇಡ್ಕರ್ ವಿಚಾರ ವೇದಿಕೆ ಸಹ ಸಂಚಾಲಕರು ನಾಗರಾಜಮೂರ್ತಿ ಪಿ. ಎನ್. ಉಪಸ್ಥಿತರಿದ್ದರು.

## ಇಂದು ಮಂಡ್ಯ ವಿದ್ಯಾಲಯದ ಮುಖ್ಯ ಪ್ರವೇಶದ್ವಾರ ಉದ್ಘಾಟನೆ

# ನವ ವಸಂತ –2026 ಯುವ ಸಂಭ್ರಮ ಕಾರ್ಯಕ್ರಮ



**ಮಂಡ್ಯ :** ಮಂಡ್ಯ ವಿಶ್ವ ವಿದ್ಯಾಲಯ ನಿರ್ಮಾಣಗೊಂಡು 7 ವರ್ಷವಾಗಿದ್ದು ವಿಶ್ವ ವಿದ್ಯಾಲಯದ ಮುಖ್ಯ ಪ್ರವೇಶದ್ವಾರವನ್ನು ರೋಮನ್ ಶೈಲಿಯಲ್ಲಿ ಸ್ಥಾಪನೆಮಾಡಲಾಗಿದೆ ಎಂದು ಮಂಡ್ಯ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಪಿ ರವಿಕುಮಾರ್ ಗಣಿಗ ರವರು ಹೇಳಿದರು.

ಮಂಡ್ಯ ವಿಶ್ವ ವಿದ್ಯಾಲಯದ ನೂತನ ಮುಖ್ಯ ಪ್ರವೇಶದ್ವಾರ ಉದ್ಘಾಟನೆ ಹಾಗೂ ನವ ವಸಂತ –2026 ಮಂಡ್ಯ ಯುವ ಸಂಭ್ರಮ ಕುರಿತು ಮಂಡ್ಯ ಬಾಯ್ಸ್ ಕಾಲೇಜು ವಿಶ್ವ ಗಂಗೋತ್ರಿ ಕ್ಯಾಂಪಸ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಮುಖ್ಯ ಮಂತ್ರಿಗಳ ವಿಶೇಷ ಅನುದಾನದಲ್ಲಿ 2 ಕೋಟಿ ವೆಚ್ಚದಲ್ಲಿ ವಿಶ್ವ ವಿದ್ಯಾಲಯದ ಕ್ರೀಡಾಂಗಣ ಕಾಮಗಾರಿಯನ್ನು ಪೂರ್ಣಗೊಳಿಸಿ ಒಳಾಂಗಣ ಕ್ರೀಡಾಂಗಣವನ್ನು ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯದಲ್ಲಿ 08 ನೂತನ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಲಾಗಿದ್ದು ನಮ್ಮ ಮಂಡ್ಯ ವಿಶ್ವವಿದ್ಯಾಲಯ ಉತ್ತಮ ಸ್ಥಿತಿಯಲ್ಲಿದೆ ಎಂಬುದು ಹೆಮ್ಮೆಯ ವಿಷಯ. ನಮ್ಮ ವಿಶ್ವವಿದ್ಯಾಲಯ ಬೇರೆ ಬೇರೆ ವಿಶ್ವ ವಿದ್ಯಾಲಯಗಳಿಗೆ ಮಾದರಿ ಯಾಗುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ನಮ್ಮ ಸರ್ಕಾರಿ ಕಾಲೇಜುಗಳು ಯಾವುದೇ ಖಾಸಗಿ ಕಾಲೇಜುಗಳಿಗೆ ಪೈಪೋಟಿ ಮಾಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನವ ವಸಂತ –2026 ಮಂಡ್ಯ ಯುವ ಸಂಭ್ರಮ ಕಾರ್ಯಕ್ರಮದಲ್ಲಿ ಜಿಲ್ಲಾ 46 ಸರ್ಕಾರಿ ಕಾಲೇಜುಗಳಿಂದ ಸುಮಾರು 20 ಸಾವಿರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಾಲಿದ್ದು ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಅಂತರ ಜಾಸ್ತಿ ಇರುವ ಎಲ್ಲಾ ಕಾಲೇಜುಗಳಿಗೂ 40 ಬಸ್ ಗಳ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದರು.

ನವ ವಸಂತ –2026 ಮಂಡ್ಯ ಯುವ ಸಂಭ್ರಮ ಕಾರ್ಯಕ್ರಮ ಜೊತೆಗೆ ವಿದ್ಯಾರ್ಥಿಗಳಿಗೆ ಹಲವು ಸಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಮಾಡಲಾಗಿದ್ದು ವೇದಿಕೆ ಕಾರ್ಯಕ್ರಮದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಏಪ್ರಿಲ್. 30.(ನಾಳೆ) ಬೆಳಿಗ್ಗೆ 9 ಗಂಟೆಯಿಂದ 11 ಗಂಟೆಯವರೆಗೆ 09 ವಿವಿಧ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಿದ್ದು 11 ಗಂಟೆಗೆ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ನಂತರ ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ಶಿವ ಚಿತ್ತಪ್ಪ, ಮಂಡ್ಯ ವಿಶ್ವವಿದ್ಯಾಲಯದ ಕುಲ ಸಚಿವರು ಮೌಲ್ಯಮಾಪನ ಪ್ರೊ. ಜಿ.ವಿ. ವೆಂಕಟರಮಣ ಮಂಡ್ಯ ವಿಶ್ವವಿದ್ಯಾಲಯ ಕುಲಸಚಿವರು ಎಂ.ಪಿ. ಕೃಷ್ಣ ಕುಮಾರ್ ರವರು ಉಪಸ್ಥಿತರಿದ್ದರು.

# ಭಗೀರಥ ಜಯಂತಿಯಲ್ಲಿ ಕೆ.ಟಿ. ಮೋಹನ್ ಕುಮಾರ್ ಸನ್ಮಾನ

**ಕೆ.ಆರ್.ನಗರ:** ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಶ್ರೀ ಭಗೀರಥ ಉಪ್ಪಾರರ ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀ ಭಗೀರಥ ಜಯಂತೋತ್ಸವ ಕಾರ್ಯಕ್ರಮದಲ್ಲಿ ತಾಲೂಕಿನ ಕಾಳಮ್ಮನಕೊಪ್ಪಲು ಗ್ರಾಮದ ಲೇಪಾಕ್ಷ ಶ್ರೀ ಪ್ರಶಸ್ತಿ ಪುರಸ್ಕೃತ ಕೆ.ಟಿ. ಮೋಹನ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.




ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಜಿಎಸ್‌ಟಿ ಅಫೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯ ಡಿ. ಜಗನ್ನಾಥ್ ಸಾಗರ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಜನನಿ ಶೌರ್ಯ ಸೌಮ್ಯ ಫೌಂಡೇಶನ್ ಅಧ್ಯಕ್ಷೆ ಡಾ. ಗೀತಾ ಸೈದಾಪುರ ಕೊಡತೆ ಉಪಸ್ಥಿತರಿದ್ದರು.

ಈ ವೇಳೆ ಸಂಘದ ಅಧ್ಯಕ್ಷ ಎಸ್. ಸೋಮು, ಮುಖಂಡರಾದ ಸಿದ್ದಶೆಟ್ಟಿ, ಪ್ರದೀಪ್, ಕುಮಾರ್, ಆನಂದ್ ಸೇರಿದಂತೆ ಶ್ರೀ ಭಗೀರಥ ಉಪ್ಪಾರರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

# ಯುವಕರಲ್ಲಿ ಯೊಸ ಆಲೋಚನೆಗಳು ಬೆಳೆಯಬೇಕು



**ಮೈಸೂರು:** ಯುವ ಸಮೂಹದಲ್ಲಿ ಹೊಸ–ಹೊಸ ಆಲೋಚನೆಗಳು ಬೆಳೆಯಲು ಸೂಕ್ತವಾದ ಪರಿಸರದ ನಿರ್ಮಾಣ ಬಹಳ ಅವಶ್ಯಕತೆ ಇದೆ ಎಂದು ಭಾರತ ಸರ್ಕಾರದ ಮಾಜಿ ಮುಖ್ಯ ವೈಜ್ಞಾನಿಕ ಸಲಹೆಗಾರ ಪದ್ಮಶ್ರೀ ಕೆ.ವಿಜಯರಾಘವನ್ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ವೈ.ಟಿ.ಮತ್ತು ಮಾಧುರಿ ತಾತಾಚಾರಿ ಭ್ರಮರ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಭ್ರಮರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಜೈವಿಕ ತಂತ್ರಜ್ಞಾನ 30–40 ವರ್ಷಗಳ ಹಿಂದಿನಂತಿಲ್ಲ. ಅದು ಸಂಪೂರ್ಣವಾಗಿ ಬದಲಾಗಿದೆ. ಹೀಗಾಗಿ ಹೊಸ ಆಲೋಚನೆಗಳು ಬೆಳಕಿಗೆ ಬರಲು ವಿಶ್ವವಿದ್ಯಾನಿಲಯಗಳಲ್ಲಿ ಸೂಕ್ತ ಪರಿಸರ ನಿರ್ಮಾಣವಾಗಬೇಕು. ಇಂತಹ ವಾತಾವರಣ ನಿರ್ಮಾಣವಾಗಲು ವಿಶ್ವವಿದ್ಯಾನಿಲಯಗಳು ಪರಸ್ಪರ ಆಲೋಚನೆಗಳನ್ನು ಹಂಚಿಕೊಳ್ಳಬೇಕು, ಅವುಗಳನ್ನು ವಿಮರ್ಶಿಸಬೇಕು. ವಿಶ್ಲೇಷಿಸಬೇಕು, ಅಗತ್ಯವಿದ್ದರೆ ತಿದ್ದುಪಡಿ ಮಾಡಬೇಕು. ಈ ರೀತಿಯ ಚರ್ಚೆ ಮತ್ತು ಪ್ರತಿಕ್ರಿಯೆಯ ಮೂಲಕ, ನಾವು ದೀರ್ಘಕಾಲದ ಪರಿಣಾಮ ಹೊಂದಿರುವ ಮೌಲ್ಯಯುತ ಆಲೋಚನೆಗಳನ್ನು ಅಭಿವೃದ್ಧಿಪಡಿಸಬಹುದು. ಅವುಗಳನ್ನು ಪ್ರಯೋಗಾತ್ಮಕವಾಗಿ ಪರೀಕ್ಷಿಸಿ, ಹೊಸ ಸಾಧನೆ ಮಾಡಬಹುದು ಎಂದರು.

ಮೈಕ್ರೋಬಯಾಲಜಿ ಆಧಾರಿತ ಜೈವಿಕ ತಂತ್ರಜ್ಞಾನದಲ್ಲಿ, ಮೊದಲು ಸಸ್ಯಗಳಿಂದ ಪಡೆಯುತ್ತಿದ್ದ ಕೆಲವು ಪಾಂಪೊ?ನೆಂಟ್‌ಗಳನ್ನು ಈಗ ಪ್ರಯೋಗಾಲಯದಲ್ಲೇ ಯೀಸ್ಟ್‌ಗಳಂತಹ ಜೀವಿಗಳಲ್ಲಿ ತಯಾರಿಸಲಾಗುತ್ತಿದೆ. ಇದೇ ರೀತಿಯಾಗಿ, ಡಯಾಬಿಟಿಸ್ ಚಿಕಿತ್ಸೆಗೆಬಳಸುವ ಇನ್ಸುಲಿನ್ ಮುಂತಾದ ಔಷಧಿಗಳನ್ನೂ ಪ್ರಯೋಗಾಲಯದಲ್ಲಿ ಸುಲಭವಾಗಿ ಉತ್ಪಾದಿಸಲಾಗುತ್ತಿದೆ. ಹೀಗಾಗಿ ಈ ಪ್ರಕ್ರಿಯೆಗಳು ಹೆಚ್ಚು ಸ್ವಯಂಚಾಲಿತವಾಗುತ್ತಿವೆ. ಸ್ಥಳೀಯವಾಗಿ ಸುಲಭವಾಗಿ ನಿರ್ವಹಿಸಬಹುದಾಗಿರುವುದರಿಂದ ಕೆಲಸಗಳ ಅವಕಾಶಗಳು ಕಡಿಮೆಯಾಗುತ್ತಿವೆ. ಆದ್ದರಿಂದ, ನಾವು ಕೇವಲ ಅನುಕರಣೆಗಳನ್ನು ಮಾಡದೇ ನಾವೀನತ್ಯೆಯಿಂದ ಕೂಡಿರಬೇಕು. ಇದಕ್ಕೆ ಯುವ ಜನರಿಂದ ಬರುವ ಹೊಸ ಆಲೋಚನೆಗಳನ್ನು ಬಳಸಿಕೊಳ್ಳುವುದೇ ಪರಿಹಾರ ಕ್ರಮವಾಗಿದೆ ಎಂದರು.

ಇಂದಿನ ಜಗತ್ತು ಅನೇಕ ಸವಾಲುಗಳಿಂದ ಕೂಡಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನವೂ ಮಹಾಪ್ರವಾಹದಂತೆ ಬರುತ್ತಿರುವುದರಿಂದ ವಿಶ್ವದಾದ್ಯಂತ ಅನೇಕ ಉದ್ಯೋ ಕಳೆದುಕೊಳ್ಳುವ ಭೀತಿ ಉಂಟು ಮಾಡುತ್ತಿದೆ. ಜೈವಿಕ ತಂತ್ರಜ್ಞಾನದಲ್ಲಿಯೂ ದೊಡ್ಡ ಮಟ್ಟದ ಬದಲಾವಣೆಗಳು ನಡೆಯುತ್ತಿವೆ. ಇತರ ತಂತ್ರಜ್ಞಾನಗಳೂ ನಮ್ಮ ಲೌಕಿಕತೆ ಕಡಿಮೆ ಮಾಡುತ್ತಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುದ್ಧಗಳು ನಡೆಯುತ್ತಿವೆ. ಅನಿಶ್ಚಿತತೆ ಹೆಚ್ಚಾಗಿದೆ. ಆದ್ದರಿಂದ, ಯುವಜನತೆಗೆ ಇದು ಸವಾಲುಗಳ ಮತ್ತು ಅನಿಶ್ಚಿತತೆಯ ಕಾಲವೆನ್ನಬಹುದು.

ಆದರೂ ಇದು ಮಹತ್ವದ ಆಲೋಚನೆಗಳು ಅರಳುವ ಕಾಲ. ಏಕೆಂದರೆ ಸವಾಲುಗಳ ಸಮಯದಲ್ಲೇ ಜನರು ಹೊಸ ಪರಿಹಾರಗಳನ್ನು ಕಂಡುಹಿಡಿಯುತ್ತಾರೆ ಎಂದು ವಿಶ್ಲೇಷಣೆ ನಡೆಸಿದರು. ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಮಕೃಷ್ಣ ಮಠದ ಯುಕ್ತೇಶನಂದಜೀ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಬಯೋಕೆಮಿಸ್ಟ್ರಿ ವಿಭಾಗದ ಪ್ರೊ.ರ.ಪಿ.ಎನ್. ರಂಗರಾಜನ್, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಪ್ರಮೋದ್ ಕುಮಾರ್, ಭ್ರಮರ ಟ್ರಸ್ಟ್‌ನ ಪೊರ.ಆರ್.ಶ್ರೀನಿವಾಸನ್ ಮತ್ತಿತರರು ಹಾಜರಿದ್ದರು.

# ರೈತರ ಬೇಡಿಕೆಗಳಿಗೆ ಮನವಿ: ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ಎಚ್ಚರಿಕೆ

**ಕೆ.ಆರ್.ನಗರ:** ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ವತಿಯಿಂದ ಸಾಲಿಗ್ರಾಮ ತಾಲೂಕು ಕಚೇರಿಯಲ್ಲಿ ಶಿರಸ್ತೆದಾರ್ ತಿಮ್ಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ರಾಜ್ಯ ಉಪಾಧ್ಯಕ್ಷ ಅಂಕನಹಳ್ಳಿ ತಿಮ್ಮಪ್ಪ ಮಾತನಾಡಿ ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಿಲ್ಲ ಇದರ ಬಗ್ಗೆ ಸಭೆಯನ್ನು ಕರೆಯಬೇಕು, ಕೃಷಿ ಪಂಪ್ ಸೆಟ್ ಗಳಿಗೆ ಅಕ್ರಮ ಸಕ್ರಮ ಯೋಜನೆಯನ್ನು ಮರು ಜಾರಿಗೊಳಿಸಬೇಕು, ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ನಿಗದಿ ಮಾಡಿರುವಂತೆ ಕಾರ್ಖಾನೆ ಮಾಲೀಕರು ಮತ್ತು ಸರ್ಕಾರ ನೀಡಬೇಕಾಗಿರುವ ತಲಾ 50 ರೂಗಳನ್ನು ರೈತರ ಖಾತೆಗೆ ಜಮಾ ಮಾಡಬೇಕು, ಸರ್ಕಾರ ನಿಗದಿ ಮಾಡಿರುವ ಕಬ್ಬು ಟನ್ ಒಂದಕ್ಕೆ 150 ರೂ ಬಾಕಿ ಹಣವನ್ನು ಬಿಡುಗಡೆ ಮಾಡಬೇಕು, ಕಾಡು ಪ್ರಾಣಿಗಳಿಂದ ರೈತರು ಮೃತಪಟ್ಟರೆ ರಾಜ್ಯ ಸರ್ಕಾರವು ಮೃತರ ಕುಟುಂಬಕ್ಕೆ 50 ಲಕ್ಷ ರೂ ಪರಿಹಾರದ ಹಣ ನೀಡಬೇಕು ಜೊತೆಗೆ ಸರ್ಕಾರಿ ಉದ್ಯೋಗವನ್ನು ನೀಡಬೇಕು ಇಲ್ಲದಿದ್ದರೆ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು ಎಂದರು.

ತಾಲೂಕಿನ ಚುಂಚನಕಟ್ಟೆ ಹೋಬಳಿಗೆ ಸೇರಿದ ನಿಜಗನಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮೀದೇವಿ ಸ್ಟೋನ್ ಕ್ರಷರ್ ನಿಂದ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದ ಅಕ್ಕ ಪಕ್ಕದ ರೈತರುಗಳಿಗೆ, ಕೆರೆಕಟ್ಟೆಗಳು ಹಾಗೂ ಪ್ರಾಣಿ ಪಕ್ಷಿಗಳಿಗೆ ತೊಂದರೆ ಆಗುತ್ತಿದೆ. ಇದರಿಂದ ನಿಜಗನಹಳ್ಳಿ ಮತ್ತು ಹೊಸಕೋಟೆ ಗ್ರಾಮದ ಜನರು ಭಯಭೀತರಾಗಿದ್ದಾರೆ. ಇದರ ಬಗ್ಗೆ ಸಾಲಿಗ್ರಾಮ ತಾಲೂಕು ದಂಡಾಧಿಕಾರಿಗಳಿಗೆ ಈಗಾಗಲೇ ಹಲವು ಬಾರಿ ಮನವಿ ಸಲ್ಲಿಸಿದರು ಕೂಡ ಯಾವುದೇ ಅಗತ್ಯ ಕ್ರಮವನ್ನು ಕೈಗೊಂಡಿಲ್ಲ. ಜಿಲ್ಲಾಧಿಕಾರಿಗಳು ಇತ್ತ ಗಮನ ಹರಿಸಿ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಶಾಬಾಳು ರವಿ, ಮುಖಂಡರುಗಳಾದ ಚಂದ್ರಹಾಸ, ನಾಗರಾಜು, ರಾಜಚಾರಿ, ವೀಣಾ, ವಿನೋದ, ನಿರ್ಮಲ, ತಾಲೂಕು ಕಚೇರಿ ಸಿಬ್ಬಂದಿ ಕೃಷ್ಣಮೂರ್ತಿ ಇದ್ದರು.



# ಬಿಸಲವಾಡಿ ಪಿಎಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸಿ. ಬಸವಣ್ಣ, ಆಯ್ಕೆ



**ಚಾಮರಾಜನಗರ:** ತಾಲೂಕಿನ ಬಿಸಲವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ–ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತರಾದ ಸಿ. ಬಸವಣ್ಣ ಹಾಗೂ ಸಿದ್ದಶೆಟ್ಟಿ ಅವರು ಅವಿರೋಧವಾಗಿ ಇಂದು ಆಯ್ಕೆಯಾದರು.

ಸಂಘ ಅಧ್ಯಕ್ಷರಾಗಿದ್ದ ಶಿವಸ್ವಾಮಿ, ಉಪಾಧ್ಯಕ್ಷೆ ನೀಲಮ್ಮ ಅವರು ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ಗ್ರಾಮದ ಸಹಕಾರ ಸಂಘ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಿ. ಬಸವಣ್ಣ, ಉಪಾಧ್ಯಕ್ಷ ಸ್ಥಾನಕ್ಕೆ ಸಿದ್ದಶೆಟ್ಟಿ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಅಧೀಕ್ಷಕ ನಾಗೇಶ್ ಅವರು ಅಧಿಕೃತವಾಗಿ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ–ಉಪಾಧ್ಯಕ್ಷರಿಗೆ ಅಭಿನಂದನೆ: ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿ, ಸಹಕಾರ ಸಂಘದಿಂದ ರೈತರ ಅಭಿವೃದ್ಧಿ ಸಾಧ್ಯವಾಗಿದ್ದು, ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಕಲ್ಪಿಸುವ ಮೂಲಕ ಅವರ ಅಭಿವೃದ್ಧಿಗೆ ನೂತನ ಆಡಳಿತ ಮಂಡಲಿಯವರು ದುಡಿಯಬೇಕು. ಸ್ಥಳೀಯ ಶಾಸಕರಾದ ಸಿ. ಪುಟ್ಟರಂಗಶೆಟ್ಟರು ಎಂಎಂಡಿಸಿ ಬ್ಯಾಂಕ್ ನಿರ್ದೇಶಕರಾಗಿದ್ದು, ನಮ್ಮ ಪಕ್ಷದವರೇ ಅಧ್ಯಕ್ಷರು ಸಹ ಆಗಿದ್ದಾರೆ. ಹೀಗಾಗಿ ಮುಂದಿನ ದಿನಗಳಲ್ಲಿ ಸಾಲ, ಇತರೇ ಸೌಲಭ್ಯಗಳನ್ನು ಪಡೆದುಕೊಳ್ಳ ಲು ಅನುಕೂಲವಾಗುತ್ತದೆ. ಸಹಕಾರ ಸಂಘದ ಪ್ರಗತಿಗೆ ಎಲ್ಲರು ಒಗ್ಗಟ್ಟಿನಿಂದ ದುಡಿಯಬೇಕು ಎಂದು ತಿಳಿಸಿದರು.

ನೂತನ ಅಧ್ಯಕ್ಷ ಸಿ. ಬಸವಣ್ಣ ಮಾತನಾಡಿ, ಸಂಘದ ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ಮುಖಂಡರು, ಹಿರಿಯರು ಹಾಗು ನಿರ್ದೇಶಕರು ಒಮ್ಮತದಿಂದ ಅವಿರೋಧ ಆಯ್ಕೆ ಮಾಡಿರುವುದಕ್ಕೆ ಅಭಾರಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಸಂಘ ಹಾಗು ಸರ್ಕಾರದಿಂದ ರೈತರಿಗೆ ದೊರೆಯುವ ಎಲ್ಲಾ ಸಾಲ ಸೌಲಭ್ಯಗಳನ್ನು ಕಲ್ಪಿಸಲು ಬದ್ಧನಾಗಿದ್ದೇನೆ. ಸಂಘದ ಎಲ್ಲಾ ನಿರ್ದೇಶಕರ ಸಹಕಾರ ಮುಂದೆಯೂ ಹೀಗೆ ಇರಲಿ ಎಂದು ಆಶಿಸಿದರು.

ಸಭೆಯಲ್ಲಿ ಸಂಘದ ಮಾಜಿ ಅಧ್ಯಕ್ಷ ಶಿವಸ್ವಾಮಿ, ಮಾಜಿ ಉಪಾಧ್ಯಕ್ಷೆ ನೀಲಮ್ಮ, ನಿರ್ದೇಶಕರಾದ ಉಮೇಶ್, ನಾಗರಾಜಪ್ಪ, ಪದ್ಮಾವತಿ, ಮಂಜುನಾಥ, ಶಿವಕುಮಾರ್, ಬಸವನಾಯಕ ಪಿ. ಕುಮಾರ್, ಬಿ. ನಂಜಪ್ಪ, ಸಿಇಓ ಆಶೋಕ್, ನೌಕರರಾದ ಪ್ರಸನ್ನ, ನಾಗರಾಜು ಇದ್ದರು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಬಿಸಲವಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಸಿ. ಮಹದೇವಪ್ಪ, ವಿ. ಪ್ರಭುಸ್ವಾಮಿ, ಸದಸ್ಯರಾದ ನಾರಾಯಣನಾಯಕ, ಪಿ.ಎಲ್.ಡಿ. ಬ್ಯಾಂಕ್ ನಿರ್ದೇಶಕ ಬಿಸಲವಾಡಿ ರವಿ, ಮುಖಂಡರಾದ ಎನ್. ಚನ್ನಬಸಪ್ಪ, ನಾಗರಾಜು, ಮಹದೇವಯ್ಯ, ಸಿದ್ದನಾಯಕ, ಶಿವಕುಮಾರ್, ಗುರುಶಾಂತು, ಶಿವಾನಂದ, ಶಿವಕುಮಾರ್ ಬಂದಿಗೌಡನಹಳ್ಳಿ, ಮಹೇಶ್, ಬಿ.ಎಂ. ಬಸವರಾಜು, ನಾಗರಾಜು, ನಾಗಣ್ಣ ಅನೇಕರು ಶಾಲು ಹೊದಿಸಿ, ಹಾರ ಹಾಕಿ ಅಭಿನಂದಿಸಿದರು.

ಚಾಮರಾಜನಗರ ತಾಲೂಕಿನ ಬಿಸಲವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ–ಉಪಾಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತರಾದ ಸಿ. ಬಸವಣ್ಣ, ಸಿದ್ದಶೆಟ್ಟಿ ಅವರು ಅವಿರೋಧವಾಗಿ ಆಯ್ಕೆಯಾದರು.

ರಾಜ್ಯ ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಪುಷ್ಪ ಅಮರನಾಥ್ ಮಹಿಳೆಯರಿಗೆ ಮೀಸಲಾತಿ ನೀಡುವಲ್ಲಿ ಬಿಜೆಪಿ ಮಹಿಳೆಯರು ಪ್ರತಿಭಟನೆಗೆ ಹಾಸ್ಯ ಆಸ್ಪದ ಚಾಮರಾಜನಗರ ಮುಖಂಡರಿಗೆ ಬಿಜೆಪಿ ಮುಖಂಡರಿಗೆ ಮಾಹಿತಿ ಕೊರತೆ ಇದೆ. ಜನರನ್ನು ದಿಕ್ಕು ತಪ್ಪಿಸುವ ಹುನ್ನಾರ ಮಾಡಿದ್ದಾರೆ

ಮಹಿಳಾ ಸಮಾನತೆ ತರಲಲು ಅನೇಕ ನಾಯಕರು ಮಾತನಾಡಿದ್ದರು , ಬುದ್ದ ಬಸವ ಅಂಬೇಡ್ಕರ್ ಸಮಾನತೆ ತಂದರು ಸ್ವಾತಂತ್ರ್ಯ ಕ್ಕಾಗಿ ಹೋರಾಟ ಮಾಡಿದ ಕಾಂಗ್ರೆಸ್ ಸಂವಿಧಾನದಲ್ಲಿ 33 % ಕೊಡಲು ಸಂವಿದಾನದಲ್ಲಿ ಮೀಸಲೀಡುತ್ತಾರೆ. ಎಲ್ಲಾ ರಾಜಕೀಯ ವಾಗಿ ಮೀಸಲಾತಿ ಮೂರನೇ ಒಂದು ಭಾಗ ಮಹಿಳೆಯರು ಹೆಚ್ಚಾಗಿರುವ ದೇಶ ಮಹಿಳೆಯೆಉಗೆ ಮೀಸಲಾತಿ ಇಚ್ಛಾಸಕ್ತಿ ಬೇಕು. ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಪಂಚಾಯಿತ್ ಸ್ಥಳೀಯ ಸಂಸ್ಥೆಗಳು ಮೀಸಲಾತಿ ಜಾರಿಮಾಡಲಾಗಿದೆ ಮುನ್ನುಡಿ ಬರೆದಿದ್ದು ಕಾಂಗ್ರೆಸ್ ಪಕ್ಷ , ಮನುಸ್ಮೃತಿ ಪ್ರತಿಪಾದಿಸುವ ಬಿಜೆಪಿ ಹಲವು ನಾಯಕರುಗೆ ಪ್ರಶ್ನೆಗಳಿಗೆ ಮಾಡಿದ್ದಾರೆ.

2023 ರಲ್ಲಿ ಬಿಲ್ ಕಾಯ್ದೆ ಜಾರಿಯಾಗಿದೆ ಮತ್ತೆ ಯಾಕೆ ಬಿಲ್ ತರಬೇಕು ಬಡಲಡ ಏರಿಕೆ ನೆಪದಲ್ಲಿ ಕಾಯ್ದೆ ಕಾನೂನು ಬದ್ದವಾಗಿ ಡಿಲಿಮೀಡೇಷನ್ ಜನಸಂಖ್ಯೆ ಆದಾರಿತ ವಾಗಿ ಜಾರಿಯಾಗಬೇಕು. ತರಾತುರಿಯಲ್ಲಿ ಅದೀವೇಶನ ಕರೆಯುದಿಲ್ಲ, ಮಹಿಳಾ ಮೀಸಲಾತಿ ಜಾರಿನಾಡಿದ್ದರು. ಅಗಿಲ್ಲ. ಇಚ್ಛಾಸಕ್ತಿ ಇಲ್ಲ ಪ್ರಧಾನ ಮಂತ್ರಿ ಗಳು ಜಾರಿಮಾಡಬೇಕು.

ಮಹಿಳೆಯರ ಪರವಾಗಿದರೆ.

# ಕುರುಬರ ಸಂಘಕ್ಕೆ ಚುನಾವಣೆ ನಡೆಸಲು ಹೈಕೋರ್ಟ್ ಆದೇಶ



**ಮಂಡ್ಯ:** ಮಂಡ್ಯ ಜಿಲ್ಲಾ ಕುರುಬರ ಸಂಘದ ಮುಂದಿನ ಆಡಳಿತ ಮಂಡಳಿಯ ಆಯ್ಕೆಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ ಎಂದು ಸಂಘದ ಮಾಜಿ ನಿರ್ದೇಶಕ ಎ. ಕೃಷ್ಣ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಡಳಿತ ಮಂಡಳಿಯ ಪರ–ವಿರೋಧದ ಜಟಾಪಟಿಗೆ ಕೊನೆಗೂ ಹೈಕೋರ್ಟ್ ಬ್ರೇಕ್ ಹಾಕಿದೆ. ಮಳವಳ್ಳಿ ಸುರೇಶ್ ನೇತೃತ್ವದ ಸಂಘದ ಆಡಳಿತ ಮಂಡಳಿಯ ಅವಧಿ ಮುಗಿದಿದ್ದರೂ ಸಹಕಾರ ಸಂಘಗಳ ಉಪನಿಬಂಧಕರಿಗೆ ತಪ್ಪು ಮಾಹಿತಿ ನೀಡಿ ಕಾನೂನುಬಾಹಿರವಾಗಿ ಅಧಿಕಾರದಲ್ಲಿ ಮುಂದುವರೆಯುತ್ತಿರುವುದನ್ನು ನ್ಯಾಯಾಲಯ ಖಂಡಿಸಿದೆ ಎಂದು ಹೇಳಿದರು.

ಹಾಲಿ ಅಧ್ಯಕ್ಷ ಸುರೇಶ್ ಹಾಗೂ ವಿರೋಧಿ ಬಣಗಳ ನಡುವೆ ಆರೋಪ–ಪ್ರತ್ಯಾರೋಪಗಳು, ವಾಕ್ಸಮರಗಳು ಜಿಲ್ಲೆಯಲ್ಲಿ ಚರ್ಚೆಗೆ ಗ್ರಾಸವಾಗಿದ್ದವು. ಇತ್ತೀಚೆಗೆ ಸಂಘದ ಆವರಣದಲ್ಲೇ ಸುರೇಶ್ ಮೇಲೆ ಕಪ್ಪು ಮಸಿ ಎರಚಿದ ಘಟನೆ ನಡೆದಿದ್ದು, ಇದರಿಂದ ಉದ್ವಿಗ್ನತೆ ಹೆಚ್ಚಿತ್ತು. ಇದೀಗ ನ್ಯಾಯಾಲಯ ಸಹಕಾರ ಸಂಘಗಳ ಉಪನಿರ್ದೇಶಕರ ಆದೇಶಕ್ಕೆ ತಡೆಯಾಜ್ಞೆ ನೀಡಿದೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ತಕ್ಷಣ ಸಂಘದ ಎಲ್ಲಾ ದಾಖಲೆಗಳನ್ನು ತಮ್ಮ ವಶಕ್ಕೆ ಪಡೆದು, ಕೋರ್ಟ್ ಆದೇಶದಂತೆ ಕಾನೂನುಬದ್ಧವಾಗಿ ಹೊಸ ಆಡಳಿತ ಮಂಡಳಿಗೆ ಚುನಾವಣೆ ನಡೆಸಬೇಕು ಎಂದು ಆಗ್ರಹಿಸಿದರು.

ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಜೆ. ಶಶಿಧರ್ ಕಾನೂನು ಹೋರಾಟದ ಬಗ್ಗೆ ಹೇಳಿದ್ದನ್ನು ಉಲ್ಲೇಖಿಸಿದ ಅವರು, ಈಗ ನ್ಯಾಯಾಲಯದ ಮೂಲಕ ಉತ್ತರ ನೀಡಲಾಗಿದೆ. ಸಮುದಾಯದ ಮುಂದೆ ಕ್ಷಮೆ ಕೇಳಿ ಚುನಾವಣೆಯನ್ನು ಎದುರಿಸಿ ಆಯ್ಕೆಯಾಗಲು ಅವಕಾಶವಿದೆ. ಚುನಾವಣೆಯ ಮೂಲಕವೇ ಭವಿಷ್ಯದ ನಿರ್ದೇಶಕರಿಗೆ ನ್ಯಾಯ ದೊರೆಯುತ್ತದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಮಳವಳ್ಳಿ ಟಿಎಪಿಸಿಎಂಎಸ್ ನಿರ್ದೇಶಕ ಚಂದಹಳ್ಳಿ ಶ್ರೀಧರ್, ಸುರೇಶ್ ಅವರ ನಡೆಗೆ ವಿರೋಧ ವ್ಯಕ್ತಪಡಿಸಿ ಕಪ್ಪು ಮಸಿ ಬಳಿಯಲಾಗಿತ್ತು. ಇದೀಗ ಅವರ ಅನೈತಿಕ ಕ್ರಮಕ್ಕೆ ಹೈಕೋರ್ಟ್ ತಕ್ಕ ಪಾಠ ಕಲಿಸಿದೆ ಎಂದರು. ಭವಿಷ್ಯದಲ್ಲಿ ಇದಕ್ಕೆ ಸಹಕಾರ ನೀಡಿದ ಅಧಿಕಾರಿಗಳ ಮೇಲೂ ಕ್ರಮ ಜರುಗಬೇಕು ಎಂದು ಒತ್ತಾಯಿಸಿದರು.

ಸಮುದಾಯದ ಮಾನಹಾನಿ ಮಾಡಿದವರು ಸಂಘದ ಆವರಣಕ್ಕೆ ಬರಬಾರದು. ನ್ಯಾಯಾಲಯದ ಮೇಲೆ ಗೌರವವಿದ್ದರೆ ಚುನಾವಣೆಯಲ್ಲಿ ಗೆದ್ದು ಬರಲಿ. ಅವರ ಅಧಿಕಾರಾವಧಿಯಲ್ಲಿ ಬಂದ ದೇಣಿಗೆಗಳ ವಿವರವನ್ನು ಬಹಿರಂಗಪಡಿಸಬೇಕು ಎಂದು ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ವಕೀಲ ಶಂಕರ್, ಬೀರೇಶ್, ರಮೇಶ್, ಶಿವರಾಮ್, ಗೋಪಾಲ್, ಮಧು ಹೆಗ್ಗಡೆ, ಮಂಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸ್ಮಶಾನ ಜಾಗ ಉಳಿಸಲು ಎರೆಬೊರೆ ಕಾವಲ್ ಗ್ರಾಮಸ್ಥರ ಒತ್ತಾಯ

**ಹಾಸನ:** ತಾಲೂಕಿನ ಎರೆಬೊರೆ ಕಾವಲ್ ಗ್ರಾಮದಲ್ಲಿ ಸ್ಮಶಾನಕ್ಕೆ ಮೀಸಲಿಟ್ಟಿದ್ದ ನಾಲ್ಕು ಎಕರೆ ಜಾಗದಲ್ಲಿ ಕಲ್ಲು ಕಾಣಿಗರಿಕೆಗೆ ಅನುಮತಿ ನೀಡಿರುವುದನ್ನು ಖಂಡಿಸಿ ಗ್ರಾಮಸ್ಥರು ಸ್ಮಶಾನ ಜಾಗದ ಬಳಿ ಪರಿಶೀಲನೆಗೆ ಆಗಮಿಸಿದ ಅಧಿಕಾರಿಗಳ ಜೊತೆ ವಾಗ್ವಾದ ನಡೆಸಿದರು.

1994 ರಲ್ಲಿ 4.20 ಎಕರೆ ಜಾಗವನ್ನು ರುದ್ರಭೂಮಿಗಾಗಿ ಮೀಸಲಿಟ್ಟ ಜಾಗವನ್ನು ಕ್ರಮೇಣವಾಗಿ ಅಧಿಕಾರಿಗಳು ಉಳ್ಳವರ ಪರವಾಗಿ ಕೆಲಸ ಮಾಡಿ ಸ್ಮಶಾನ ಭೂಮಿಯನ್ನು ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಿದ್ದಾರೆ ಕೂಡಲೇ ಮಂಜೂರಾತಿಯನ್ನು ರದ್ದು ಮಾಡಿ ಜಾಗವನ್ನು ಸ್ಮಶಾನಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಶ್ರೀನಿವಾಸ್ ಮಾತನಾಡಿ, ಸುಮಾರು 45 ಮನೆಗಳನ್ನು ಹೊಂದಿರುವ ನಮ್ಮ ಗ್ರಾಮದಲ್ಲಿ ಸ್ಮಶಾನದ ಜಾಗವಿಲ್ಲದೆ ಕಷ್ಟವಾಗಿದೆ ಈ ಹಿಂದೆ ಮೀಸಲಿಟ್ಟಿದ್ದ ಜಾಗವನ್ನೇ ನಮಗೆ ಸ್ಮಶಾನಕ್ಕಾಗಿ ಮೀಸಲಿಡಬೇಕು, ಕಳೆದ ಹಲವು ವರ್ಷಗಳಿಂದ ನಮ್ಮ ಗ್ರಾಮದಲ್ಲಿ ಮೃತಪಟ್ಟವರನ್ನು ಇಲ್ಲಿಂದ ಸುಮಾರು 10 ಕಿಮೀ ದೂರವಿರುವ ಬಟ್ಟಗೌಡನಹಳ್ಳಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ ಮಾಡಲಾಗುತ್ತಿದೆ ಆದರೆ ಇದಕ್ಕಾಗಿ ಸುಮಾರು 20 ರಿಂದ 50 ಸಾವಿರ ವೆಚ್ಚ ತಗಲುತ್ತಿದ್ದು ಇದು ಬಡವರಿಗೆ ಹೊರೆಯಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಇದೇ ವಿಚಾರವಾಗಿ ಗ್ರಾಮ ಪಂಚಾಯತಿ, ತಹಶೀಲ್ದಾರ್, ಜಿಲ್ಲಾಧಿಕಾರಿಗಳು ಹೀಗೆ ಎಲ್ಲಾ ಅಧಿಕಾರಿಗಳಿಗೆ ಮನವಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ, ಅಧಿಕಾರಿಗಳು ಪ್ರಭಾವಿಗಳ ಜೊತೆ ಶಾಮೀಲಾಗಿ ಇದ್ದೊಂದು ಜಾಗವನ್ನು ಗ್ರಾಮಸ್ಥರ ಗಮನಕ್ಕೆ ಬಾರದೆ ಕಲ್ಲು ಗಣಿಗಾರಿಕೆ ಮಾಡಲು ಅನುಮತಿ ನೀಡಿದ್ದಾರೆ ಗ್ರಾಮದಲ್ಲಿ ಇದನ್ನು ಬಿಟ್ಟರೆ ಪರ್ಯಾಯ ಜಾಗವೂ ಇರುವುದಿಲ್ಲ ಆದುದರಿಂದ ಈ ಜಾಗ ಸ್ಮಶಾನಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಈಗಾಗಲೆ ಸಂವಿಧಾನಬದ್ಧವಾಗಿ ಹಲವು ಬಾರಿ ಮನವಿ ಮಾಡಿದ್ದೇವೆ ಮುಂದೆ ನಮ್ಮ ಮನವಿಗೆ ಸ್ಪಂದಿಸಿ ಜಾಗವನ್ನು ಸ್ಮಶಾನಕ್ಕೆ ಮೀಸಲಿಡದೆ ಹೋದರೆ ಗ್ರಾಮದಲ್ಲಿ ಮೃತಪಟ್ಟವರನ್ನು ತಾಲೂಕು ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿಯೆದುರು ತಂದು ಅಲ್ಲಿಯೇ ಇಟ್ಟುಕೊಂಡು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಇದಲ್ಲದೆ ಗ್ರಾಮದಲ್ಲಿ ಸುಮಾರು 50 ವರ್ಷಗಳಿಂದ ವಿವಿಧ ಜಾತಿ ಜನಾಂಗದ ಸುಮಾರು 45 ಕುಟುಂಬಗಳು ವಸಮಾಡುತ್ತಿದ್ದು ತಮಗೆ ತಮಗೆ ಹಕ್ಕು ಪತ್ರ ನೀಡಬೇಕು ಎಂದು ಎಲ್ಲಾ ಅಧಿಕಾರಿಗಳಿಗೂ ಮನವಿ ಮಾಡಿದರೂ ಮನವಿ ಪತ್ರವನ್ನೂ ನೀಡಿಲ್ಲ ದಯಮಾಡಿ ಅಧಿಕಾರಿಗಳು ಇಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಿ ಅನುಕೂಲ ಕಲ್ಪಿಸಬೇಕು ಎಂದು ಮನವಿ ಮಾಡಿದರು

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಚಂದ್ರೇಗೌಡ, ಅಭಿಷೇಕ್, ನಂದನ್ ಕುಮಾರ್, ಅಣ್ಣಾ ದೊರೆ, ದೊರೆಸ್ವಾಮಿ, ಮಂಜುಳಮ್ಮ, ಗೌರಮ್ಮ, ಈಶ್ವರಿ, ಕವಿತಾ, ತಂಗ್ಯಮ್ಮ, ಸೀಮಿತ್ರ, ಅನಿತಾ, ದ್ಯಾವಮ್ಮ, ಜ್ಯೋತಿ, ಮೀನಾಕ್ಷಿ, ಹರೀಶ, ಸಾಕಮ್ಮ, ದಮ್ಮಯ್ಯ, ಮಂಜು ನಾಯಕ್, ಅಭಿ, ಪ್ರಶಾಂತ, ಲಕ್ಷ್ಮಮ್ಮ, ಇತರರು ಉಪಸ್ಥಿತರಿದ್ದರು



# ಶ್ರೀ ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ
## ದುಷ್ಟ ಹಿರಣ್ಯಕಶಿಪುವಿನ ಸಂಹಾರಕ್ಕೆ ನರಸಿಂಹ ಅವತಾರ



ಸೌಮ್ಯಸನತ್

ವೈಶಾಖ ಮಾಸದಲ್ಲಿ ಅಕ್ಷಯ ತೃತೀಯದ ನಂತರ ಬರುವ ಒಂದು ಪ್ರಮುಖ ಪರ್ವ ನರಸಿಂಹ ಜಯಂತಿ. ವೈಶಾಖ ಶುದ್ಧ ಚತುರ್ದಶಿಯಂದು ಸಮಸ್ತ ದೇವತೆಗಳ ಕೋರಿಕೆಯಂತೆ ದುಷ್ಟ ಹಿರಣ್ಯಕಶಿಪುವಿನ ಸಂಹರಿಸಲು ಸರ್ವೋತ್ತಮನಾದ ಶ್ರೀಮಹಾವಿಷ್ಣುವು ತಾಳಿದ ಅವತಾರವೇ ನರಸಿಂಹ ಅವತಾರ. ವಿಷ್ಣುವಿನ ಹತ್ತು ಅವತಾರಗಳಲ್ಲಿ ನರಸಿಂಹ ಅವತಾರವೂ ಒಂದು. ಪುರಾಣಗಳ ಪ್ರಕಾರ ನರಸಿಂಹ ಅವತಾರವು ಬಲು ಮುಖ್ಯ ಮತ್ತು ವೈಶಿಷ್ಟ್ಯವಾದುದು. ವಿಷ್ಣುವಿನ ಅನೇಕ ರೂಪಗಳಲ್ಲಿ ನರಸಿಂಹ ರೂಪವು ಅತಿ ವಿಶಿಷ್ಟವಾದ ಹಾಗೂ ಅತ್ಯುಗ್ರವಾದ ರೂಪ.

ನೃಸಿಂಹಾತಾರದಲ್ಲಿ ಉಳಿದ ಎಲ್ಲಾ ಅವತಾರಗಳಂತೆ ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನಗಳ ಜೊತೆಗೆ ಭಗವಂತನು ಅಸಾಧಾರಣವಾದ ತನ್ನ ನೈಜ ವಿಭೂತಿಯನ್ನು ಭಗವತ್ ತತ್ತ್ವವನ್ನೂ ಸ್ಪಷ್ಟವಾಗಿ ಪ್ರಕಟಪಡಿಸಿದ್ದಾನೆ. ಅನಿಷ್ಟಗಳನ್ನು ನಿವೃತ್ತಿ ಮಾಡುವ ಮೂಲಕ ಇಷ್ಟ ಪ್ರಾಪ್ತಿಯನ್ನು ಮಾಡಿ ದ್ವಿದಳ ಫಲವನ್ನು ಕೊಡುವ ಪರಮದೈವ ನರಸಿಂಹದೇವ. ಆದ್ದರಿಂದಲೇ ಅವನನ್ನು ಪುರಾಣ ಶಾಸ್ತ್ರಗಳಲ್ಲಿ ಹಾಗೂ ಹರಿದಾಸರ ವಾಣಿಯಲ್ಲಿ ಭಯನಿವಾರಣ ಎಂದು ಸಂಬೋಧಿಸಿದ್ದಾರೆ. ಎಲ್ಲರ ಪಾಪಗಳೆಂಬ ಅಂಧಕಾರಕ್ಕೆ ಸೂರ್ಯನಂತಿರುವವನು ನರಸಿಂಹದೇವ.

ಈ ನರಸಿಂಹ ಎಂಬ ಶಬ್ದದಲ್ಲಿ ಅನೇಕ ಸ್ವಾರಸ್ಯಗಳು ಅಡಗಿವೆ. ನರ(ಮನುಷ್ಯ)ಸಿಂಹ(ಮೃಗ) ಎರಡೂ ಆಕಾರಗಳನ್ನು ಒಂದೇ ದೇಹದಲ್ಲಿ ಉಳ್ಳವನೇ 'ನರಸಿಂಹ'. ಅರ ಎಂದರೆ ದೋಷ. ನಾರ ಎಂದರೆ ದೋಷವೇ ಇಲ್ಲದವ. ಅಂತಹ ದೋಷಮುಕ್ತ ಸಿಂಹ ನರಸಿಂಹ. "ನಾರಂ" ಎಂದರೆ ವೈಕುಂಠ ಅಲ್ಲಿಗೆ ಕರೆದೊಯ್ಯುವವ. ನರಸಿಂಹ ರೂಪದಿಂದಲೇ ಎಲ್ಲರಿಗೂ ಮೋಕ್ಷವನ್ನು ಕೊಡುವವ ಎಂದು ಶಾಸ್ತ್ರಗಳು ಸಾರುತ್ತವೆ.

ಇಂದು ಭಗವಾನ್ ವಿಷ್ಣುವು ನರಸಿಂಹ ಅವತಾರವನ್ನು ತಳೆದು ಹಿರಣ್ಯಕಶ್ಯಪುವನ್ನು ಕೊಂದ ದಿನ. ಇದಕ್ಕೂ ಒಂದು ಐತಿಹ್ಯವಿದೆ.

ಭೂಪಾಲಕನಾದ ಶ್ರೀವಿಷ್ಣು ತನ್ನ ಮಡದಿ ಶ್ರೀಲಕ್ಷ್ಮೀಯೊಂದಿಗೆ ಏಕಾಂತದಲ್ಲಿ ಇರುತ್ತಾನೆ. ಇದೇ ಸಂದರ್ಭ ಋಷಿಗಳ ಆಗಮನವಾಗುತ್ತದೆ. ಆಗ ದ್ವಾರಪಾಲಕರಾದ ಜಯ-ವಿಜಯರು ವೈಕುಂಠ ಪ್ರವೇಶಿಸಲು ಋಷಿಗಳನ್ನು ತಡೆಯುತ್ತಾರೆ. ಪರಿ ಪರಿಯಾಗಿ ಹೇಳಿ ಅವರಿಗೆ ವೈಕುಂಠ ಪತಿ ಶ್ರೀ ವಿಷ್ಣುವಿನ ದರ್ಶನ ಮಾಡದಂತೆ ತಡೆಯುತ್ತಾರೆ. ಇದರಿಂದ ಕುಪಿತಗೊಂಡ ಋಷಿಗಳು ಭೂಲೋಕದಲ್ಲಿ ಜನಿಸುವಂತೆ ಜಯ-ವಿಜಯರಿಗೆ ಶಾಪ ನೀಡುತ್ತಾರೆ. ಇದೇ ಸಂದರ್ಭ ಋಷಿಗಳು ತಮಗೆ ನೀಡಿದ ಶಾಪದ ಬಗ್ಗೆ ದ್ವಾರಪಾಲಕರಾದ ಜಯ-ವಿಜಯರು ವಿಷ್ಣುವಿಗೆ ತಿಳಿಸುತ್ತಾರೆ. ಶಾಪ ವಿಮೋಚನೆಗೆ ಬೇಡಿದಾಗ ವಿಷ್ಣುವು ನೀವು ನನ್ನ ಸ್ನೇಹಿತರಾಗಿ ಬಂದು ಏಳು ಜನ್ಮವನ್ನು ಪಡೆದು ಶಾಪ ವಿಮೋಚನೆ ಮಾಡುತ್ತಿರೋ ಅಥವಾ ಮೂರು ಜನ್ಮಗಳಲ್ಲಿ ತನ್ನ ಶತ್ರುಗಳಾಗಿ ಬಂದು ಶಾಪ ವಿಮೋಚನೆ ಮಾಡಿಕೋಳ್ಳುತ್ತೀರೋ? ಎಂದು ಕೇಳಿದಾಗ ಅವರು ನಾವು ನಿನ್ನ ಶತ್ರುಗಳಾಗಿ ಬಂದು ಶಾಪ ವಿಮೋಚನೆ ಮಾಡಿಕೊಳ್ಳುತ್ತೇವೆ ಎಂದರು. ಅದರ ಫಲವೇ ಹಿರಣ್ಯಾಕ್ಷ ಮತ್ತು ಹಿರಣ್ಯ ಕಶಿಪುವಿನ ಜನನ.

ಹಿರಣ್ಯಕಶ್ಯಪುವಿಗೆ ಮದುವೆಯಾಗಿ ಪುತ್ರ ಸಂತತಿ ಪ್ರಾಪ್ತಿಯಾಗುತ್ತದೆ. ಆತನ ಹೆಸರೇ ಪ್ರಹ್ಲಾದ. ಇದೇ ಸಂದರ್ಭ ಆ ಮಗುವಿಗೆ ನಾರದರು ಗರ್ಭಾವಸ್ಥೆಯಲ್ಲಿ ಶ್ರೀಹರಿಯ ಮೇಲೆ ಭಕ್ತಿ ಮೂಡುವಂತೆ ಮಾಡುತ್ತಾರೆ. ಹಿರಣ್ಯ ಕಶ್ಯಪು ಹರಿಯನ್ನು ದ್ವೇಷಿಸುವ ಕಾರಣ ಪ್ರಹ್ಲಾದನಿಗೆ ಹರಿಯನ್ನು ಭಜಿಸದಂತೆ ಹೇಳುತ್ತಾನೆ. ಅದನ್ನು ಕೇಳದೇ ಪ್ರಹ್ಲಾದ ಶ್ರೀಹರಿಯನ್ನು ಭಜಿಸಿ ಪೂಜಿಸುತ್ತಾನೆ. ಇದರಿಂದ ಕೋಪಗೊಂಡ ಹಿರಣ್ಯ ಕಶ್ಯಪು ಪ್ರಹ್ಲಾದನಿಗೆ ಹಲವು ಕಿರುಕುಳವನ್ನು ಕೊಡುತ್ತಾನೆ. ಆಗ ಪ್ರಹ್ಲಾದ ವಿಷ್ಣುವಿನ ಅನುಗ್ರಹದಿಂದ ಕಷ್ಟಗಳಿಂದ ಪಾರಾಗುತ್ತಾನೆ.

ಕೊನೆಗೊಂದು ದಿನ ಪ್ರಹ್ಲಾದನ ಭಕ್ತಿಯನ್ನು ಪರೀಕ್ಷಿಸಲು ದುಷ್ಟನಾದ ಹಿರಣ್ಯಕಶ್ಯಪು ಮಗನನ್ನು ಕರೆದು ಹರಿಯನ್ನು ತೋರಿಸು ಎಂದು ಹೇಳದಾಗ ಅತ ಸರ್ವಾಂತರ್ಯಾಮಿ ಎಲ್ಲೆಲ್ಲೂ ಇದ್ದಾನೆ. ಆತ ಅರಮನೆಯಲ್ಲಿದ್ದ ಕಂಬಗಳಲ್ಲಿಯೂ ಇದ್ದಾನೆ ಎಂದು ಪ್ರತಿ ಕಂಬಗಳನ್ನು ತೋರಿಸಿ ಹೇಳುತ್ತಾನೆ. ಆಗ ಕುಪಿತಗೊಂಡ ಹಿರಣ್ಯಕಶ್ಯಪು ಕೊನೆಗೆ ಒಂದು ಕಂಬವನ್ನು ಗದಾಪ್ರಹಾರದಿಂದ ಒಡೆಯುತ್ತಾನೆ. ಆಗ ಕಂಬದಿಂದ ಉದ್ಭವಿಸಿದವನೇ ಶ್ರೀ ಉಗ್ರನರಸಿಂಹ. ಶ್ರೀ ಹರಿಯು ನರಸಿಂಹ ರೂಪಿಯಾಗಿ ಬರಲು ಕಾರಣವೊಂದಿದೆ. ಅದೇ ಹಿರಣ್ಯಕಶ್ಯಪುವಿಗೆ ಪ್ರಾಪ್ತವಾದ ಬ್ರಹ್ಮ ದೇವನ ವರ.

ಹಿರಣ್ಯಕಶ್ಯಪನು ತನ್ನನ್ನು ಮೇಲೆ ಅಥವಾ ಕೆಳಗೆ, ಮನುಷ್ಯನಿಂದ ಅಥವಾ ಪ್ರಾಣಿಯಿಂದ, ಅಸ್ತ್ರಗಳಿಂದ ಅಥವಾ ಅಯುಧಗಳಿಂದ ಒಳಗೂ ಅಲ್ಲ ಹೊರಗೂ ಅಲ್ಲದೇ, ಬೆಳಗ್ಗೆಯೂ ಅಲ್ಲ, ಸಂಜೆಯೂ ಅಲ್ಲದೇ ಸಾವು ಬರಬಾರದು ಎಂಬ ವರ ಪಡೆದಿದ್ದ. ಆದುದರಿಂದ ವಿಷ್ಣುವು ನರನೂ ಅಲ್ಲದ ಪ್ರಾಣಿಯೂ ಅಲ್ಲದ ನರಸಿಂಹ ಅವತಾರ ತಾಳಿ ಹಿರಣ್ಯಕಶ್ಯಪುವನ್ನು ಒಳಗೂ ಅಲ್ಲದೇ, ಹೊರಗೂ ಅಲ್ಲದೇ ಹೊಸ್ತಿಲ ಮೇಲೆ, ಮೇಲೂ ಅಲ್ಲ ಕೆಳಗೂ ಅಲ್ಲದಂತೆ ನರಸಿಂಹನು ತನ್ನ ತೊಡೆಯ ಮೇಲೆ ಇಟ್ಟು ಆತನ ಹೊಟ್ಟೆಯ ಮಧ್ಯದಲ್ಲಿ ಅಸ್ತ್ರಗಳಿಂದ ಅಥವಾ ಅಯುಧಗಳಿಂದಲ್ಲದೆ ತನ್ನ ನಖಗಳಿಂದ, ಬೆಳಗ್ಗೆಯೂ ಅಲ್ಲ ಸಂಜೆಯೂ ಅಲ್ಲದೇ ತ್ರಿಸಂಧ್ಯಾ ಕಾಲದಲ್ಲಿ ನರಸಿಂಹನ ರೂಪದಲ್ಲಿ ಬಂದು ಹಿರಣ್ಯಕಶ್ಯಪುವನ್ನು ಸಂಹರಿಸುತ್ತಾನೆ. ಅಂದು ವೈಶಾಖಮಾಸ ಚತುರ್ದಶಿ ಸ್ವಾತಿ ನಕ್ಷತ್ರ. ಸ್ವತಃ ನರಸಿಂಹ ಸ್ವಾತಿ ನಕ್ಷತ್ರದಲ್ಲಿ ಜನಿಸಿದ ಎಂದು ಪ್ರತೀತಿಯಿದೆ.





ಅದು ವೈಶಾಖದ ಶುಕ್ಲ ಚತುರ್ದಶಿ. ಪ್ರಹ್ಲಾದನ ಭಕ್ತಿಯ ಪರಾಕಾಷ್ಠೆಯನ್ನು ಜಗತ್ತಿಗೆ ತೋರಿಸಲೆಂದೇ ವಿಷ್ಣು ತಾನೇ ಮನುಷ್ಯ-ಮೃಗ ಸೇರಿ ನರಸಿಂಹನಾದ. ಹಗಲು ರಾತ್ರಿ ತೊರೆದು ಮುಸ್ಸಂಜೆಯ ವೇಳೆಗೆ, ಯಾವ ತಂದೆ ತಾಯಿಯೂ ಇಲ್ಲದ ಜನನ ಮರಣಗಳಿಲ್ಲದ ಭಗವಂತ ಕಂಬದಿಂದ ಉದ್ಭವಿಸಿದ. ಮನೆಯ ಒಳಹೊರಗೆ ಬಾರದೇ ಹೊಸ್ತಿಲಲ್ಲಿ ಕುಳಿತು ಯಾವ ಅಸ್ತ್ರ-ಶಸ್ತ್ರಗಳಿಲ್ಲದೇ ಕೈ ಉಗುರಿನಿಂದಲೇ ಆ ದಾನವನ ಸಂಹಾರಗೈದ. ಸತ್ಯಯುಗದಲ್ಲಿ ಭಯೋತ್ಪಾದನೆಯ ಕಾಲವನ್ನು ಅಂತ್ಯಗೊಳಿಸಿದ. ಆ ದಿನವನ್ನೇ "ನರಸಿಂಹ ಜಯಂತಿ" ಎಂದು ಇಂದಿಗೂ ಭಕ್ತರು ವೈಭವದಿಂದ ಆಚರಿಸುತ್ತ ಬಂದಿದ್ದಾರೆ. ಮನೆಯ ಹೊಸ್ತಿಲಲ್ಲಿ ನರಸಿಂಹ ದೇವರು ಸದಾ ನೆಲೆಸಿದ್ದಾರೆ ಎಂಬ ಪ್ರತೀತಿ ನಂಬಿಕೆ ಬೆಳೆದು ಬಂದಿದೆ.ಆದ್ದರಿಂದಲೇ ಇಂದಿಗೂ ಎಲ್ಲ ಸಂಪ್ರದಾಯದವರೂ ಬ್ರಾಹ್ಮೀ ಮುಹೂರ್ತದಲ್ಲಿ ಹೊಸ್ತಿಲನ್ನು ತೊಳೆದು ರಂಗವಲ್ಲಿ ಹಾಕಿ ಪೂಜೆ ಮಾಡುತ್ತಾರೆ.

ದೇಶದ ತುಂಬೆಲ್ಲ ಅನೇಕ ಪುಣ್ಯ ಕ್ಷೇತ್ರಗಳಲ್ಲಿ ನರಸಿಂಹ ಸ್ವಾಮಿಯ ದೇಗುಲಗಳಿವೆ. ಅದರಲ್ಲೂ ಅತೀ ಪ್ರಾಚೀನ ಹಾಗೂ ಪುರಾಣಗಳಲ್ಲಿ ಉಲ್ಲೇಖಗೊಂಡ ಕೆಲವು ಕ್ಷೇತ್ರಗಳು ನಮ್ಮ ಕರ್ನಾಟಕದಲ್ಲಿವೆ. ಕೃಷ್ಣಾ ತೀರದಲ್ಲಿರುವ ಪರಶುರಾಮ ಕ್ಷೇತ್ರವೆಂದೇ ಪ್ರಸಿದ್ಧವಾದ ಶೂರ್ಪಾಲಯ. ನೀರಾ ನಾರಸಿಂಹ, ತೊರವೆ ನಾರಸಿಂಹ, ಅಹೋಬಲ ನಾರಸಿಂಹ, ಕದಿರಿ ನರಸಿಂಹ, ಸಿಂಹಾಚಲ ವರಾಹಿ ನರಸಿಂಹ ಪ್ರನ್ನೊಬಲಂ ನರಸಿಂಹ, ಮುಕುಟಕಾನ ಹುಬ್ಬಳ್ಳಿಯ ನಾರಸಿಂಹ ಹೀಗೆ ಅನೇಕ ಕ್ಷೇತ್ರಗಳಲ್ಲಿ ವೈಭವದ ನರಸಿಂಹ ಜಯಂತಿ ಉತ್ಸವ ನಡೆಯುತ್ತದೆ. ಆಚರಣೆಯಲ್ಲಿಯೂ ವಿಶೇಷ ಕ್ರಮವಿದೆ. ಸಾಯಂಕಾಲದ ವರೆಗೂ ಉಪವಾಸದಿಂದಲೇ ಪೂಜೆ ಅಭಿಷೇಕ ಹೋಮ ಪಾರಾಯಣ ಎಲ್ಲವನ್ನೂ ನೆರವೇರಿಸುತ್ತಾರೆ. ಸಂಜೆ 6 ರಿಂದ 6.30 ವರೆಗೆ ಜಯಂತೀಕಾಲವೆಂದು ತಿಳಿಸಿದ್ದಾರೆ. ಎಲ್ಲ ನರಸಿಂಹ ಕ್ಷೇತ್ರಗಳಲ್ಲಿಯೂ ಆ ಸಮಯದಲ್ಲಿ ವಿಜೃಂಭಣೆಯ ರಥೋತ್ಸವ ನಡೆಯುತ್ತದೆ. ನಂತರದಲ್ಲಿಯೇ ನರಸಿಂಹ ದೇವರ ನೈವೇದ್ಯ ಹಾಗೂ ಭಕ್ತಾದಿಗಳ ತೀರ್ಥ ಪ್ರಸಾದ ನಡೆಯುವುದು.

ಮನುಷ್ಯ ಮತ್ತು ಸಿಂಹ ಇವೆರಡರ ಸಂಮಿಲಿತಗೊಂಡ ವಿಷ್ಣುವಿನ ಅವತಾರವೇ ನರಸಿಂಹಾವತಾರ. ಮನುಷ್ಯ ಉನ್ನತಿಗೆ ಏರಿದಂತೆಲ್ಲಾ ತನ್ನ ಅಹಂ ಅನ್ನು ಬೆಳೆಸಿಕೊಳ್ಳುತ್ತಾ, ತಾನು ಪರಮಾತ್ಮನ ಸೃಷ್ಟಿಯ ಒಂದು ಭಾಗ ಎಂಬ ಅರಿವಿನ ಜಾಗೃತಿಯ ಪರಿವೆಯನ್ನು ಪ್ರಯತ್ನಪೂರ್ವಕವಾಗಿ ಮರೆಮಾಡಿಕೊಳ್ಳುತ್ತಾ, ತಾನೇ ಮಿಗಿಲು, ತನ್ನ ಸುತ್ತಲಿನ ಪ್ರಾಣಿ ಪ್ರಪಂಚ ಕೀಳು, ತನ್ನ ಹೆಂಡತಿ ಮಕ್ಕಳಿಗೇನು ಗೊತ್ತು, ನಾನು ಎಲ್ಲಾ ಸಂಪಾದಿಸುತ್ತಿದ್ದೇನೆ, ಇಡೀ ವಿಶ್ವವನ್ನೇ ಜಯಿಸುವಾಗ ಈ ವಿಶ್ವಕ್ಕೆ ಯಾವ ದೊಣ್ಣೆ ನಾಯಕ ಸೃಷ್ಟಿಕರ್ತ, ನಾನು ಏನು ಮಾಡಿದರೂ ನಡೆಯುತ್ತದೆ, ಎಲ್ಲರೂ ನನ್ನನ್ನೇ ಪ್ರಭುವೆಂದು ಕೊಂಡಾಡಬೇಕು – ಇಂತಹ ವಾಂಚಲ್ಯ, ದುರಭಿಮಾನ, ಅನ್ಯಮನಸ್ಕತೆ, ದುರಹಂಕಾರ ವೃದ್ಧಿಸುತ್ತಾ ಹೋಗುತ್ತದೆ. ಈ ರೀತಿಯಾಗಿ ತನ್ನ ಬದುಕೆಂಬ ಅನುಭವದ ಯಾತ್ರೆಯಲ್ಲಿ ಪುನೀತನಾಗುವ ಅವಕಾಶವನ್ನು ಕಳೆದುಕೊಳ್ಳುವ ಮಾನವ, ದಾನವನಾಗಿ ಪರಿವರ್ತಿತಗೊಂಡು ಭಯದ, ಲೋಭಧ, ಮೋಹದ, ಕ್ರೋಧದ ದಾನವತೆಯನ್ನು ಬಾಳುತ್ತಾ ಮುಂದೆ ಸಾಗುತ್ತಾನೆ.

ಹಿರಣ್ಯಾಕ್ಷ, ಹಿರಣ್ಯಕಶಿಪು ಅಂತಹ ರಾಕ್ಷಸರ ಬಾಳು ಇಂದಿನ ಬಹುತೇಕ ದಾಹಿಗಳ ಬದುಕಿನ ಒಂದು ನೆರಳಿನಂತೆ ಕಾಣುತ್ತದೆ. ಇಂತಹವರು ಇಂದು ಹೇರಳವಾಗಿ ಕಾಣುತ್ತಾರೆ, ಅಷ್ಟೇ ಅಲ್ಲ! ನಾವು ಸರಿಯಾಗಿದ್ದೇವೆ ಎಂದು ಹೇಳಿಕೊಳ್ಳುವ ನಮ್ಮ ಸ್ವಯಂ ಪ್ರತಿಷ್ಠೆಯಲ್ಲೂ ನಮ್ಮಲ್ಲಿ ನಾವೇ ಈ ಗುಣಗಳನ್ನು ಆಗಾಗ ಕಂಡುಕೊಳ್ಳುತ್ತಿರುತ್ತೇವೆ. ಬಹಳಷ್ಟು ವೇಳೆ ನಮ್ಮ ಪುಟ್ಟ ಮಕ್ಕಳು ತಮ್ಮ ಮುಗ್ಧತೆಯಲ್ಲಿ ತೋರುವ ದಿವ್ಯತೆಯನ್ನು ಸಹಾ ನಮಗೆ ಅನುಭಾವಿಸಲು ಸಾಧ್ಯವಾಗದೆ ನಮ್ಮ ಬಾಳನ್ನು ದುಸ್ತರವಾಗಿ ಬದುಕುತ್ತಿರುತ್ತೇವೆ.

ನಾವು ಸೂಕ್ಷ್ಮವಾಗಿ ನಮ್ಮ ಬದುಕನ್ನು ಅಧ್ಯಯಿಸಿಕೊಂಡು ಮಗುವಿನ ನಿರ್ಮಲ ಮನಸ್ಸಿನಿಂದ ಎಲ್ಲವೂ ನಿನ್ನದೇ, ನನ್ನದೇನಿದೆ ಎಂಬಂತಹ ಪ್ರೀತಿಯಾದ ಭಕ್ತಿಯನ್ನು ಅಳವಡಿಸಿಕೊಳ್ಳ ತೊಡಗಿದಾಗ ನಮ್ಮ ಮಾನವತನ ಮತ್ತು ಸಿಂಹತನದ ಅಗಾಧ ಶಕ್ತಿ ರಾಜ ಗಾಂಭೀರ್ಯಗಳು ನಮ್ಮ ಬಲವಾಗಿ, ಅದೇ ದೈವಶಕ್ತಿಯಾಗಿ ರೂಪುಗೊಂಡು ನಮ್ಮಲ್ಲಿರುವ ಎಲ್ಲ ರಾಕ್ಷಸ ಪ್ರವೃತ್ತಿಗಳೂ ಅಸುನೀಗುತ್ತವೆ. ಹೀಗಾಗಿ ಪ್ರಹ್ಲಾದನ ಮುಗ್ಧ ಪ್ರೀತಿ, ನರಸಿಂಹ ಎಂಬ ದಿವ್ಯತೆ ಮತ್ತು ಹಿರಣ್ಯಾಕ್ಷ – ಹಿರಣ್ಯಕಶಿಪುಗಳೆಂಬ ಅವಗುಣಗಳ ನಾಶದ ಕತೆಯನ್ನು ನಮ್ಮ ಕತೆಯನ್ನಾಗಿಯೇ ಕಂಡುಕೊಂಡು ನಮ್ಮ ಬದುಕನ್ನು ಉತ್ತಮತೆಯ ಕಡೆಗೆ ನಡೆಸಿಕೊಳ್ಳುವ ಸಾಧ್ಯತೆ ಇದೆ.

ನಮ್ಮೆಲ್ಲರ ಬದುಕು ಸುಗಮವಾಗಲಿ. ಈ ಜಗತ್ತಿನ ಹಿರಣ್ಯಾಕ್ಷ ಹಿರಣ್ಯಕಶಿಪುಗಳು ನಮ್ಮ ಪ್ರಾರ್ಥನೆಯಿಂದ ವಿನಾಶಗೊಂಡು ಈ ವಿಶ್ವವು ಸಜ್ಜನರ ವಿಶ್ವವಾಗಿ ಸುಂದರ ನಂದನವಾಗಿ ರೂಪುಗೊಳ್ಳಲಿ ಎಂದು ಶ್ರೀ ಲಕ್ಷ್ಮೀ ನರಸಿಂಹ ದೇವರಲ್ಲಿ ನಮ್ರವಾಗಿ ಪ್ರಾರ್ಥಿಸೋಣ.

# ನರಸಿಂಹ ಜಯಂತಿಯ ಮಹತ್ವ

"ಓಂ ಭಗವತೆ ನರಸಿಂಹಾಯ"



ಗಿರಿಜಾ.ಎಸ್.
ದೇಶಪಾಂಡೆ.
ಬೆಂಗಳೂರು.

ನರಸಿಂಹ ಜಯಂತಿಯು ವಿಷ್ಣುವಿನ ಅವತಾರವಾದ ನರಸಿಂಹದೇವರ ಜನ್ಮವಾರ್ಷಿಕೋತ್ಸವವನ್ನು ಆಚರಿಸುವ ಹಿಂದೂಹಬ್ಬವಾಗಿದೆ.ಇದು ಹಿಂದೂ ಚಾಂದ್ರಮಾನ ಮಾಸದ ವೈಶಾಖ ಮಾಸದಲ್ಲಿ ಬರುತ್ತದೆ.

ಭಗವನ್ ನರಸಿಂಹ ದೇವರನ್ನು ಅರ್ಧ ಸಿಂಹ ,ಅರ್ಧ ಮಾನವ ರೂಪದಲ್ಲಿ ಚಿತ್ರಿಸಲಾಗಿದೆ.ತನ್ನ ಭಕ್ತ ಪ್ರಲ್ಹಾದನನ್ನು ಅವನ ರಾಕ್ಷಸ ತಂದೆ ಹಿರಣ್ಯಕಶಿಪುವಿನಿಂದ ರಕ್ಷಿಸಲು ಭೂಮಿಯ ಮೇಲೆ ಕಾಣಿಸಿಕೊಂಡನು ಎಂದು ನಂಬಲಾಗಿದೆ.ಈ ದಿನದಂದು ವಿಷ್ಣು ಮತ್ತು ನರಸಿಂಹ ದೇವರಿಗೆ ಸಮರ್ಪಿತವಾದ ದೇವಾಲಯಗಳಲ್ಲಿ ವಿಶೇಷ ಆಚರಣೆಗಳನ್ನು ,ಪೂಜೆಗಳನ್ನು ನಡೆಸಲಾಗುತ್ತದೆ.

**ನರಸಿಂಹ ಜಯಂತಿಯ ಮಹತ್ವ:** ನರಸಿಂಹ ಜಯಂತಿಯು ಹಿಂದೂಗಳಿಗೆ ವಿಶೇಷವಾಗಿ ವಿಷ್ಣುವನ್ನು ಪೂಜಿಸುವವರಿಗೆ ಪ್ರಮುಖ ಹಬ್ಬವಾಗಿದೆ.ವಿಷ್ಣುವಿನ ಅವತಾರವೆಂದು ಪರಿಗಣಿಸಲಾದ ಭಗವಾನ್ ನರಸಿಂಹನ ಅವಿರ್ಭಾವವನ್ನು ಆಚರಿಸಲಾಗುತ್ತದೆ.ಭಕ್ತ ಪ್ರಲ್ಹಾದನನ್ನು ಅವನ ರಾಕ್ಷಸ ತಂದೆ ಹಿರಣ್ಯಕಶಿಪುನಿಂದ ರಕ್ಷಿಸಲು ಬಂದಿದ್ದಾನೆ ಎಂದು ನಂಬಲಾಗಿದೆ.ದುಷ್ಟತನದ ಮೇಲೆ ಒಳ್ಳೆಯದರ ವಿಜಯ ,ಧರ್ಮದ ವಿಜಯ ಸಂಕೇತಿಸುವದರಿಂದ ಹೆಚ್ಚಿನ ಮಹತ್ವ ಪಡೆದಿದೆ.ನರಸಿಂಹ ದೇವರನ್ನು ಉಗ್ರ ಮತ್ತು ಶಕ್ತಿಶಾಲಿ ದೇವರಾಗಿ ಪೂಜಿಸಲಾಗುತ್ತದೆ.ನರಸಿಂಹ ದೇವರು ಭಕ್ತರನ್ನು ಎಲ್ಲ ರೀತಿಯ ಅಪಾಯಗಳಿಂದ ರಕ್ಷಿಸುತ್ತಾನೆ.ಭಕ್ತರಿಗೆ ಸಂತೋಷ ,ಸಮೃದ್ಧಿ,ಅಧ್ಯಾತ್ಮಿಕ ಜ್ಞಾನೋದಯ ನೀಡುತ್ತಾನೆ.



**ಪೌರಾಣಿಕ ಹಿನ್ನೆಲೆ:** ವಿಷ್ಣುವಿನ ಅವತಾರವಾದ ನರಸಿಂಹನ ಕಥೆಯು ಹಿಂದೂಧರ್ಮಗ್ರಂಥವಾದ ಭಾಗವತ ಪುರಾಣದಲ್ಲಿ ವಿವರಿಸಲಾಗಿದೆ.ಪ್ರಭಲ ರಾಕ್ಷಸ ಹಿರಣ್ಯಕಶಿಪು ಬ್ರಹ್ಮನಿಂದ ವರವನ್ನು ಪಡೆದಿದ್ದನು.ಅದು ಅವನನ್ನು ಅಜೇಯನನ್ನಾಗಿ ಮಾಡಿದ್ದರಿಂದ ಅವನು ದುರಂಹಕಾರಿಯಾದನಲ್ಲದೇ ಜನರ ಮೇಲೆ ದಬ್ಬಾಳಿಕೆ ಹಿಂಸಿಸಲು ಪ್ರಾರಂಭಿಸಿದ್ದನು.ತನ್ನನ್ನು ತಾನು ವಿಶ್ವದ ಸರ್ವೋಚ್ಚ ಆಡಳಿತಗಾರನೆಂದು ಘೋಷಿಸಿಕೊಂಡನು. ಅವನ ಮಗ ಪ್ರಲ್ಹಾದನು ವಿಷ್ಣುವಿನ ಪರಮಭಕ್ತನಾಗಿದ್ದನು. ತನ್ನ ತಂದೆಯ ಅಧಿಕಾರ ಸ್ವೀಕರಿಸಲು ನಿರಾಕರಿಸಿದನು.ಪ್ರಲ್ಹಾದನು ವಿಷ್ಣುವಿನ ಭಕ್ತನಾಗಿದ್ದರಿಂದ ಕೋಪಗೊಂಡ ಹಿರಣ್ಯಕಶಿಪು ಅವನನ್ನು ಕೊಲ್ಲಲು ತನ್ನ ಸಹೋದರಿ ಹೋಳಿಕಾನನ್ನು ಬಿಟ್ಟರೂ ಸಹ ಪ್ರಲ್ಹಾದನಿಗೆ ಯಾವುದೇ ಹಾನಿಯಾಗದೇ ಹೋಳಿಕಾನೇ ಸುಟ್ಟು ಸಾಯುತ್ತಾಳೆ.ಪ್ರಲ್ಹಾದನು ವಿಷ್ಣುವಿನ ಅಸ್ತಿತ್ವ ತೋರಿಸಲು ಸವಾಲು ಹಾಕಿ ಒಂದು ಸ್ತಂಬವನ್ನು ತೋರಿಸಿ ವಿಷ್ಣು ಎಲ್ಲೆಡೆ ಇರುವನು ಎಂದಾಗ ಹಿರಣ್ಯಕಶಿಪು ತನ್ನ ಗಧೆಯಿಂದ ಕಂಬವನ್ನು ಹೊಡೆದಾಗ ಅರ್ಧ ಮನುಷ್ಯ ಅರ್ಧ ಸಿಂಹನರೂಪದ ನರಸಿಂಹನು ಕಾಣಿಸಿಕೊಂಡು ಭೀಕರ ಯುದ್ಧದಲ್ಲಿ ಮುಸಂಜೆಯಲ್ಲಿ ಹಿರಣ್ಯಕಶಿಪುನನ್ನು ಸಂಹಾರ ಮಾಡಿದನು.ನಂತರ ನರಸಿಂಹ ದೇವರು ಪ್ರಲ್ಹಾದನನ್ನು ಸಮಾಧಾನ ಪಡಿಸಿ ಅವನಿಗೆ ಅನೇಕ ವರನೀಡಿ ತನ್ನ ಸೌಮ್ಯ ಸ್ವಭಾವ ಬಹಿರಂಗ ಪಡಿಸಿದನು.

ನರಸಿಂಹ ದೇವರ ಅವತಾರವು ಭಕ್ತಿ,ನಂಬಿಕೆ,ಶಕ್ತಿಯ ಬಗ್ಗೆ ದೇವರು ತನ್ನ ಭಕ್ತರನ್ನು ಅಪಾಯದಿಂದ ಹೇಗೆ ರಕ್ಷಿಸುತ್ತಾನೆ ಎಂಬುದನ್ನು ನಮಗೆ ಕಲಿಸುತ್ತದೆ.ಸದಾಚಾರದ ಮಹತ್ವವನ್ನು ಕೆಟ್ಟದ್ದರ ಮೇಲೆ ಒಳ್ಳೆಯದರ ಅಂತಿಮ ವಿಜಯವನ್ನು ಒತ್ತಿ ಹೇಳುತ್ತದೆ.

ನರಸಿಂಹ ಜಯಂತಿಯಂದು ಪೂಜೆ ಮತ್ತು ಭಕ್ತಿಯಿಂದ ಉಪವಾಸ ಆಚರಿಸಿದರೆ ಅಧ್ಯಾತ್ಮಿಕ ಉನ್ನತಿ ,ಸಮೃದ್ಧಿ ಮತ್ತು ನಕಾರಾತ್ಮಕ ಶಕ್ತಿಗಳಿಂದ ರಕ್ಷಣೆ ಸೇರಿದಂತೆ ಅಪಾರ ಆಶೀರ್ವಾದಗಳು,ಪ್ರಯೋಜನಗಳು ದೊರೆಯುತ್ತವೆ.ನರಸಿಂಹ ಜಯಂತಿಯಂದು ಭಗವಂತನನ್ನು ಭಕ್ತಿಯಿಂದ ಪೂಜಿಸಿ ಭಗವಂತನ ಆಶೀರ್ವಾದ ಪಡೆಯೋಣ.

# "ನಥಿಂಗ್ ಈಸ್ ಇಂಪಾಸಿಬಲ್: ಕೀನ್ಯಾ ಸಾವೆ"




ಡಾ.ಸುಧಾಕರ.ಜಿ.ಲಕ್ಕವಳ್ಳಿ

ಜಗತ್ತಿನಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕೀನ್ಯಾದ ಓಟಗಾರ ಸೆಬಾಸ್ಟಿಯನ್ ಸಾವೆ ಸಾಧಿಸಿ ತೋರಿಸಿದ್ದಾರೆ. ಲಂಡನ್ ಮ್ಯಾರಾಥಾನ್‌ನ 42.195 ಕಿಲೋಮೀಟರ್ ದೂರವನ್ನು ಕೇವಲ 1:59:30 ಗಂಟೆಯಲ್ಲಿ ಪೂರೈಸುವ ಮೂಲಕ ಅವರು ಮನುಷ್ಯನ ದೈಹಿಕ ಸಾಮರ್ಥ್ಯದ ಬಗ್ಗೆ ಇದ್ದ ಎಲ್ಲಾ ಹಳೆಯ ಕಲ್ಪನೆಗಳನ್ನು ಸುಳ್ಳು ಮಾಡಿದ್ದಾರೆ.

ದಶಕಗಳಿಂದ ಮ್ಯಾರಾಥಾನ್ ಅನ್ನು ಎರಡು ಗಂಟೆಯೊಳಗೆ ಮುಗಿಸುವುದು ಅಸಾಧ್ಯ ಎಂಬ ನಂಬಿಕೆಯಿತ್ತು. ಆದರೆ ಸಾವೆ ಅವರ ದೃಢ ಸಂಕಲ್ಪ ಈ ಮಿತಿಯನ್ನು ದಾಟುವಂತೆ ಮಾಡಿತು.

ಯುವಜನತೆಗೆ ಇವರ ಸಾಧನೆ ನೀಡುವ ಮೊದಲ ಪಾಠವೆಂದರೆ, ನಮ್ಮ ಮನಸ್ಸು ಒಪ್ಪುವವರೆಗೂ ಯಾವುದೇ ಗುರಿ ಅಸಾಧ್ಯವಲ್ಲ. ಅಡೆತಡೆಗಳನ್ನು ಮೆಟ್ಟಿ ನಿಲ್ಲುವ ಹಠವಿದ್ದರೆ ಇತಿಹಾಸ ನಿರ್ಮಿಸಬಹುದು ಎಂಬುದಕ್ಕೆ ಇವರೇ ಸಾಕ್ಷಿ.




ಸಾವೆ ಅವರ ಯಶಸ್ಸಿನ ಹಿಂದೆ ವರ್ಷಗಳ ಕಠಿಣ ತಪಸ್ಸಿದೆ. ತಿಂಗಳಿಗೆ ಸುಮಾರು 800 ಕಿ.ಮೀ ಓಡುವುದು ಮತ್ತು ಪ್ರತಿದಿನ ಮುಂಜಾನೆ 6 ಗಂಟೆಯಿಂದಲೇ ಅಭ್ಯಾಸ ಆರಂಭಿಸುವುದು ಅವರ ಶಿಸ್ತಿಗೆ ಸಾಕ್ಷಿ. ಇಂದಿನ ಯುವಕರು ಇನ್ಸ್ಟಂಟ್ ಗೆಲುವಿನ ಬೆನ್ನತ್ತದೆ, ಸಾವೆ ಅವರಂತೆ ಶ್ರಮವನ್ನು ಪ್ರೀತಿಸಬೇಕು. ಬೆವರು ಸುರಿಸಲು ಸಿದ್ಧವಿರುವವನಿಗೆ ಮಾತ್ರ ವಿಜಯಮಾಲೆ ಒಲಿಯುತ್ತದೆ ಎಂಬುದು ಇಲ್ಲಿನ ಸತ್ಯ. ಬಡತನ ಅಥವಾ ಸೌಲಭ್ಯಗಳ ಕೊರತೆ ಸಾಧನೆಗೆ ಅಡ್ಡಿಯಲ್ಲ. ಅಚಲವಾದ ಪರಿಶ್ರಮವಿದ್ದರೆ ಜಗತ್ತೇ ನಿಮ್ಮತ್ತ ತಿರುಗಿ ನೋಡುವಂತೆ ಮಾಡಬಹುದು. ನಥಿಂಗ್ ಈಸ್ ಇಂಪಾಸಿಬಲ್ ಎಂಬ ಮಂತ್ರವನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ, ಸೋಲು ಎಂಬುದು ಕೇವಲ ಒಂದು ತಾತ್ಕಾಲಿಕ ಘಟ್ಟವಾಗಿ ಉಳಿಯುತ್ತದೆ. ನಿಮ್ಮ ಗುರಿಯತ್ತ ದೃಷ್ಟಿಯಿರಲಿ, ಕಾಯಕದಲ್ಲಿ ಪ್ರಾಮಾಣಿಕತೆಯಿರಲಿ, ಆಗ ಯಶಸ್ಸು ನಿಮ್ಮ ಹುಡುಕಿಕೊಂಡು ಬರುತ್ತದೆ.

ಸ್ಫೂರ್ತಿ ಸುಧೆ - 09

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,